


ಏಪ್ರಿಲ್ ೨೦೨೬

# ಸೇವಾವಾಣಿ

ಆರ್ಬಿಟ್ ಸಂಸ್ಥೆ, ಹುಮನಾಬಾದ
ಮತ್ತು ಸೇವಾ ಸಂಗಮ ಸಂಸ್ಥೆ, ಕಲಬುರಗಿ

ಸಮಾಜದ ಹಿತಕ್ಕೆ ಸಮರ್ಪಿತ ಸೇವೆ







ಡಾ॥ ರಾಬರ್ಟ್ ಮೈಕಲ್ ಮಿರಾಂದ
ಧರ್ಮಾಧ್ಯಕ್ಷರು, ಹಾಗೂ ಅಧ್ಯಕ್ಷರು
ಆರ್ಬಿಟ್ ಮತ್ತು ಸೇವಾ ಸಂಗಮ ಸಂಸ್ಥೆ

ಫಾದರ್॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ


## “ಹುಮನಾಬಾದ್‌ನಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ವಿಜೃಂಭಣೆಯಿಂದ ಆಚರಣೆ”

ಬೆಳದಿಂಗಳು ಜಿಲ್ಲಾ ಒಕ್ಕೂಟ ಹಾಗೂ ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು 18 ಮಾರ್ಚ್ 2026ರಂದು ಹುಮನಾಬಾದ್‌ನ ಸೂಪರ್ ಫಂಕ್ಷನ್ ಹಾಲ್‌ನಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಕಾರ್ಯಕ್ರಮವು ಬೆಳಿಗ್ಗೆ 10 ಗಂಟೆಗೆ ಹಳೆ ತಹಸಿಲ್ದಾರ್ ಕಚೇರಿಯಿಂದ ಸೂಪರ್ ಫಂಕ್ಷನ್ ಹಾಲ್ ವರೆಗೆ ಜಾಗೃತಿ ಮೆರವಣಿಗೆಯೊಂದಿಗೆ ಆರಂಭವಾಗಿ, ಬ್ಯಾಂಡ್ಸೆಟ್‌ನೊಂದಿಗೆ ಮಹಿಳೆಯರು ಮಹಿಳಾ ಹಕ್ಕುಗಳು, ಸಮಾನತೆ ಹಾಗೂ ಸಬಲೀಕರಣದ ಸಂದೇಶಗಳನ್ನು ಒಳಗೊಂಡ ಬ್ಯಾನರ್‌ಗಳನ್ನು ಹಿಡಿದು ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಭಾಗವಹಿಸಿದರು. ಜಿಲ್ಲೆಯ ವಿವಿಧ ಗ್ರಾಮಗಳಿಂದ ಆಗಮಿಸಿದ ಸ್ವ-ಸಹಾಯ ಸಂಘಗಳ ಮಹಿಳೆಯರು ಉತ್ಸಾಹಭರಿತವಾಗಿ ಪಾಲ್ಗೊಂಡು ಮಹಿಳಾ ಏಕತೆ ಮತ್ತು ಶಕ್ತಿಯನ್ನು ಪ್ರತಿಬಿಂಬಿಸಿದರು. ಕಿರಣ ಮಹಾಸಂಘದ ಮಹಿಳೆಯರು ಪ್ರಾರ್ಥನಾ ನೃತ್ಯದ ಮೂಲಕ ದೇವರ ಆಶೀರ್ವಾದವನ್ನು ಬೇಡಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಗೌರವಾನ್ವಿತ ಅತಿಥಿ ಗಣ್ಯರನ್ನು ಶ್ರೀಮತಿ ಭಾಗ್ಯಶ್ರೀ ಅವರು (ಬೆಳದಿಂಗಳು ಜಿಲ್ಲಾ ಒಕ್ಕೂಟದ ಕಾರ್ಯದರ್ಶಿ) ಆತ್ಮೀಯವಾಗಿ ಸ್ವಾಗತಿಸಿದರು. ಸಂವಿಧಾನ ಪೀಠಿಕೆಯನ್ನು ಓದುವ ಮೂಲಕ ಕಾರ್ಯಕ್ರಮದಲ್ಲಿ ಭಾವನಾತ್ಮಕ ವಾತಾವರಣ ಮೂಡಿಸಲಾಯಿತು. ದೀಪ ಬೆಳಗಿಸುವ ಮೂಲಕ ಅತಿಥಿ ಗಣ್ಯರು ಕಾರ್ಯಕ್ರಮವನ್ನು ಉದ್ಘಾಟಿಸಿ ಚಾಲನೆ ನೀಡಿದರು. ಶ್ರೀಮತಿ ವಿಮಲಾಬಾಯಿ ಅವರು (ಬೆಳದಿಂಗಳು ಜಿಲ್ಲಾ ಒಕ್ಕೂಟದ ಅಧ್ಯಕ್ಷರು) ಆರ್ಬಿಟ್ ಸಂಸ್ಥೆಯ ಸಾಧನೆಗಳನ್ನು ಉಲ್ಲೇಖಿಸಿ ಪ್ರಾಸ್ತವಿಕ ನುಡಿಯನ್ನು ನೀಡಿದರು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಶ್ರೀಮತಿ ವಿದ್ಯಾವತಿ ಎಸ್. ಹಿರೇಮಠ ಅವರು (ರಾಜ್ಯಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಕಂಠಾನ) ಮಹಿಳಾ ದಿನಾಚರಣೆಯ ಮಹತ್ವವನ್ನು ವಿವರಿಸಿದರು. ಅವರು, “365 ದಿನಗಳೂ ಮಹಿಳೆಯರನ್ನು ಗೌರವಿಸುವ ದಿನಗಳಾಗಿವೆ. ತಾಯಿಯ ಸೇವೆ ಅಮೋಘವಾದದ್ದು, ಅದನ್ನು ಕೇವಲ ಅಡುಗೆ ಮನೆಗೆ ಅಥವಾ ಕೆಲಸಗಳಿಗೆ ಮಾತ್ರ ಸೀಮಿತಗೊಳಿಸದೆ, ಅವರನ್ನು ಪೂಜಿಸಬೇಕು” ಎಂದು ಹೇಳಿದರು. ಶ್ರೀಮತಿ ದೀಪಿಕಾ ನಾಯ್ಕರ್ ಅವರು (ಕಾರ್ಯನಿರ್ವಾಹಕ ಅಧಿಕಾರಿಗಳು, ಹುಮ್ನಾಬಾದ್) ಮಾತನಾಡುತ್ತಾ, “ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ನಮಗೆ ಅಪಾರ ಸಂತೋಷವನ್ನು ನೀಡಿದೆ. ಸಂಸ್ಥೆಯು ಮಹಿಳೆಯರನ್ನು ಎಲ್ಲಾ ಕ್ಷೇತ್ರಗಳಲ್ಲಿ ಬೆಳೆಸುವ ಕಾರ್ಯ ಮಾಡುತ್ತಿದ್ದು, ಅವರನ್ನು ಸನ್ಮಾನಿಸಿರುವುದು ಈ ಕಾರ್ಯಕ್ರಮಕ್ಕೆ ಇನ್ನಷ್ಟು ಮೆರಗು ತಂದಿದೆ” ಎಂದು ಹೇಳಿದರು. ಅಂತೆಯೇ, ಎಲ್ಲರಿಗೂ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ಕೋರಿದರು. ದಿವ್ಯ ಸಾನಿಧ್ಯ ವಹಿಸಿದ್ದ ಪರಮ ಪೂಜ್ಯ ಡಾ. ಮೈಕಲ್ ಮಿರಾಂಡಾ ಅವರು (ಗುಲ್ಬರ್ಗ ಧರ್ಮಕ್ಷೇತ್ರದ ಧರ್ಮಾಧ್ಯಕ್ಷರು) “ಮುಂಬರುವ ಚುನಾವಣೆಯಲ್ಲಿ ನಮ್ಮ ಮಹಿಳಾ ನಾಯಕರು ಗೆದ್ದರೆ, ಅದಕ್ಕೆ ವಿಶೇಷ ಅರ್ಥ ಸಿಗುತ್ತದೆ” ಎಂದು ಮಹಿಳೆಯರನ್ನು ಪ್ರೋತ್ಸಾಹಿಸಿದರು. ಇನ್ನಷ್ಟು ಸಾಧಕ ಮಹಿಳೆಯರನ್ನು ಗುರುತಿಸಿ ಸನ್ಮಾನಿಸಲು ಪ್ರೇರೇಪಿಸಿದರು. ಅತೀ ವಂದನೀಯ ಫಾದರ್ ವಿಕ್ಟರ್ ವಾಸ್ ಅವರು (ನಿರ್ದೇಶಕರು, ಆರ್ಬಿಟ್ ಸಂಸ್ಥೆ, ಹುಮ್ನಾಬಾದ್) ಎಸ್.ಐ.ಆರ್ ಕುರಿತು ಮಾತನಾಡಿ, ಮುಂಬರುವ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಎಲ್ಲರೂ ತಮ್ಮ ಮತದಾರ ಗುರುತಿನ ಚೀಟಿಗಳನ್ನು (ವೋಟರ್ ಕಾರ್ಡ್) ಬಿ.ಎಲ್.ಓ ಮುಖಾಂತರ ಪರಿಶೀಲಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕೊನೆಗೆ, ಶ್ರೀಮತಿ ಶಾಲಿನಿ ಅವರು ಧನ್ಯವಾದಗಳನ್ನು ಸಲ್ಲಿಸಿದರು. ಎಲ್ಲರೂ ರಾಷ್ಟ್ರಗೀತೆಯನ್ನು ಹಾಡುವುದರೊಂದಿಗೆ ಕಾರ್ಯಕ್ರಮವನ್ನು ಸಮಾಪ್ತಿಗೊಳಿಸಲಾಯಿತು. ಈ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ವರ್ಗದವರೂ, ಬೆಳದಿಂಗಳು ಜಿಲ್ಲಾ ಒಕ್ಕೂಟದ ಪದಾಧಿಕಾರಿಗಳು ಹಾಗೂ ಸಂಘಗಳ ಸುಮಾರು 900ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿ, ಸಂತೋಷ ಮತ್ತು ಸಂಭ್ರಮದಿಂದ ಮಹಿಳಾ ದಿನಾಚರಣೆಯನ್ನು ಆಚರಿಸಿದರು.











# "ಮಹಿಳಾ ಸಬಲೀಕರಣ ಕಾರ್ಯಕ್ರಮ"

## "ಹಕ್ಕೋತಾಯ ಜಾಲಬಂದ ಮೂಲಭೂತ ಮತ್ತು ಮಾನವ ಹಕ್ಕುಗಳ ಬಗ್ಗೆ ಅರಿವು"



ದಿನಾಂಕ 25 ಮಾರ್ಚ್ 2026ರಂದು ಚಿಟಗುಪ್ಪ ತಾಲೂಕಿನ ಮನ್ನೆಏಖೇಳಿ ಗ್ರಾಮದಲ್ಲಿ ನಾಲ್ಕು ಸಂಘದ ಸದಸ್ಯರಿಗೆ ಜಾಲ ಬಂದದ ಕುರಿತು ತರಬೇತಿ ಕಾರ್ಯಗಾರ ಹಮ್ಮಿಕೊಳ್ಳಲಾಯಿತು. ಸಿಸ್ಟರ್ ಶೀಲ ಜೆನಿಫರ್ ಇವರು ಹಕ್ಕೋತಾಯ ಜಾಲ ಬಂದ ಎಂದರೆ ಸಮಾಜದಲ್ಲಿ ಜನರಿಗೆ ಇರುವ ಹಕ್ಕುಗಳ ಬಗ್ಗೆ ಅರಿವು ಮೂಡಿಸಿ ಆ ಹಕ್ಕನ್ನು ಪಡೆಯಲು ಸಹಾಯ ಮಾಡುವ ಸಂಘಟನೆಗಳ ಅಥವಾ ವ್ಯಕ್ತಿಗಳ ಒಕ್ಕೂಟ ಅಥವಾ ಜಾಲ. ಇದರ ಮುಖ್ಯ ಉದ್ದೇಶಗಳು ಇದರ ಮುಖ್ಯ ಉದ್ದೇಶಗಳು ಜನರಿಗೆ ತಮ್ಮ ಮೂಲಭೂತ ಮತ್ತು ಮಾನವ ಹಕ್ಕುಗಳ ಬಗ್ಗೆ ಅರಿವು ನೀಡುವುದು. ಮಹಿಳೆಯರು ಮಕ್ಕಳು ಮತ್ತು ಬಡವರ ಹಕ್ಕುಗಳನ್ನು ರಕ್ಷಿಸುವುದು. ಸರಕಾರದ ಯೋಜನೆಗಳು ಮತ್ತು ಸೌಲಭ್ಯಗಳನ್ನು ಜನರಿಗೆ ತಲುಪಿಸುವುದು. ಮಹಿಳೆ ಮಕ್ಕಳು ಬಡವರು ಮತ್ತು ದುರ್ಬಲ ವರ್ಗಗಳಿಗೆ ನ್ಯಾಯ ದೊರಕುವಂತೆ ಸಹಾಯ ಮಾಡುವುದು ಜನರು ತಮ್ಮ ಹಕ್ಕುಗಳನ್ನು ತಿಳಿದುಕೊಂಡು ಅವುಗಳನ್ನು ಪಡೆಯಲು ಮತ್ತು ರಕ್ಷಿಸಲು ಮಾಡುವ ಪ್ರಯತ್ನವನ್ನು ಹಾಕೊತಾಯ ಎಂದು ಕರೆಯುತ್ತಾರೆ. ಜನರಿಗೆ ಇರುವ ಮೂಲಭೂತ ಹಕ್ಕುಗಳು ಮಾನವ ಹಕ್ಕುಗಳು, ಮಹಿಳಾ ಮತ್ತು ಮಕ್ಕಳ ಹಕ್ಕುಗಳು ಇತ್ಯಾದಿಗಳನ್ನು ಗೌರವಿಸಿ ಅವುಗಳನ್ನ ಜನರಿಗೆ ತಲುಪಿಸುವಂತೆ ಒತ್ತಾಯಿಸುವ ಪ್ರಕ್ರಿಯೆ ಸಮುದಾಯದ ಜನರು ಒಟ್ಟಾಗಿ ಸೇರಿ ಜನರ ಹಕ್ಕುಗಳನ್ನು ರಕ್ಷಿಸಲು ಅರಿವು ಮೂಡಿಸಲು ಮತ್ತು ಸಮಸ್ಯೆಗಳ ಪರಿಹಾರ ಕಂಡುಕೊಳ್ಳಲು ರೂಪಿಸುವ ಜಾಲ ಅಥವಾ ಸಂಘಟನೆ ಎಂದು ಮಾಹಿತಿ ತಿಳಿಸಿದರು.

## ಸ್ವ-ಉದ್ಯೋಗದಲ್ಲಿ ತೋಡಗಿದ ಮಹಿಳೆ"



ವ್ಯಕ್ತಿಯ ಪರಿಚಯ: ಹೆಸರು ಮಾಲನ್, ಗಂಡನ ಹೆಸರು ಅಬ್ಬಾಸ್, ಹಳ್ಳಿ ಚಿಟಗುಪ್ಪ, ಸಂಘದ ಹೆಸರು ಮಹೇಕ್, ತಾಲೂಕ ಚಿಟ್ಟಗುಪ್ಪ, ಜಿಲ್ಲೆ ಬೀದರ್. ಶ್ರೀಮತಿ ಮಾಲನ್ ಇವರು ಚಟಗುಪ್ಪದ ನಿವಾಸಿಯಾಗಿದ್ದಾರೆ ಇವರಿಗೆ ಐದು ಜನ ಮಕ್ಕಳಿದ್ದಾರೆ ಇವರ ಗಂಡ ಕೂಲಿ ಕೆಲಸ ಮಾಡುತ್ತಾರೆ 3 ಜನ ಹೆಣ್ಣು ಮಕ್ಕಳ ಮದುವೆ ಮಾಡಿದ್ದಾರೆ. ಇಬ್ಬರು ಹೆಣ್ಣು ಮಕ್ಕಳು ಓದುತ್ತಿದ್ದಾರೆ. ಇಬ್ಬರು ಗಂಡು ಮಕ್ಕಳಿದ್ದಾರೆ ಅವರು ಸಹ ಓದುತ್ತಿದ್ದಾನೆ. ಬಿಪಿಎಲ್ ಕಾರ್ಡ್ ಹೊಂದಿದ್ದಾರೆ. ಕಚ್ಚಾ ಮನೆ ಸಹ ಇದೆ. ಗಂಡ ಹೆಂಡತಿ ಇಬ್ಬರೂ ಕೂಲಿ ಕೆಲಸ ಮಾಡಿ ಮನೆಯನ್ನು ನಡೆಸುವುದು ಮತ್ತು ಆಗುಹೋಗುಗಳನ್ನು ನೋಡಿಕೊಳ್ಳುವುದು ತುಂಬಾ ಸಮಸ್ಯೆವಾಗಿತ್ತು. ಆ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಯ ಅದೀನದಲ್ಲಿ ರಚನೆಯಾದ ಮಹೇಶ್ ಸಂಘದಲ್ಲಿ ಸೇರಿಕೊಂಡು ಹಲವಾರು ತರಬೇತಿಗಳನ್ನು ಪಡೆದುಕೊಂಡು ಸಮೃದ್ಧಿ ಯೋಜನೆಯಿಂದ 30,000 ಲೋನ್ ತೆಗೆದುಕೊಂಡು ಬಟ್ಟೆ ಹೊಲಿಯುವ ಮಷೀನ್‌ಅನ್ನು ಖರೀದಿ ಮಾಡಿ ಹಾಸಿಗೆಗಳನ್ನು ಮತ್ತು ಕೆಲವು ಸಮವಸ್ತ್ರಗಳನ್ನು ಹೊಲೆಯುತ್ತಿದ್ದರು ಇದರಿಂದ ಇವರಿಗೆ ದಿನಕ್ಕೆ 300 ರಿಂದ 400 ಆದಾಯ ಬರುತ್ತಿತ್ತು ಇದರಿಂದ ಮನೆ ನಡೆಸುವುದು ಸ್ವಲ್ಪ ಸುಲಭವಾಯಿತು ಎಂದು ಹೇಳಿದ್ದಾರೆ. ಸಂಘದ ಬಗ್ಗೆ ಗೊತ್ತಿಲ್ಲದ ಸಂದರ್ಭದಲ್ಲಿ ಸಂಘವನ್ನು ಕುರಿತು ಮಾಹಿತಿಯನ್ನು ನೀಡಿ ಅನೇಕ ಗುರಿ ಉದ್ದೇಶಗಳ ಕುರಿತು ತರಬೇತಿಯನ್ನು ನೀಡಿ ಸಾಲವನ್ನು ಒದಗಿಸಿಕೊಡಲು ಸಂಸ್ಥೆಯು ಸಹಾಯ ಮಾಡಿತು. ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಯಾವ ರೀತಿಯಾಗಿ ಮುಂದೆ ಬರಬೇಕು ಎನ್ನುವುದನ್ನು ಹೇಳಿಕೊಟ್ಟ ಪರಿಣಾಮವಾಗಿ ಆರ್ಥಿಕ ಮಟ್ಟವನ್ನು ಹೆಚ್ಚಿಸಿಕೊಂಡಿದ್ದೇನೆ. ಇದಕ್ಕೆಲ್ಲ ಕಾರಣ ಆರ್ಬಿಟ್ ಸಂಸ್ಥೆ ಹಾಗಾಗಿ ನನ್ನ ಮತ್ತು ನನ್ನ ಕುಟುಂಬದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು ಸಲ್ಲಿಸುತ್ತೇನೆ ಎಂದು ಹೇಳಿದ್ದಾರೆ.

## "ಹಲವಾರು ತರಬೇತಿಗಳನ್ನು ಪಡೆದುಕೊಂಡು ಸ್ವ-ಉದ್ಯೋಗದಲ್ಲಿ ತೋಡಗಿದ ಮಹಿಳೆ"



ಹೆಸರು ಜಿಜಾಬಾಯಿ, ಗಂಡ ಅರವಿಂದ, ಹಳ್ಳಿ ಭಾತಂಬ್ರಾ, ಸಂಘ ಕನಕದಾಸ. ಸಮಸ್ಯೆ ಮತ್ತು ಪರಿಹಾರ: ಶ್ರೀಮತಿ ಜೀಜಾಬಾಯಿ ಗಂಡ ಅರವಿಂದ್ ಹಳ್ಳಿ ಭಾತಂಬ್ರಾ ಗ್ರಾಮದ ನಿವಾಸಿಯಾಗಿದ್ದು. ಇವರಿಗೆ 2 ಗಂಡು 1 ಹೆಣ್ಣು ಮಕ್ಕಳಿದ್ದು ಜೀವನ ನಡೆಸಲು ತುಂಬಾ ಕಷ್ಟಕರವಾಗಿತ್ತು. ಗುಡಿಸಲು ಮನೆ ಇದ್ದು ಬಿಪಿಎಲ್ ಕಾರ್ಡ್ ಹೊಂದಿದವರಾಗಿದ್ದರು. ಜಿಜಾಬಾಯಿ ಅವರು 11 ವರ್ಷದಲ್ಲಿ ಸಂಘದಲ್ಲಿ ಸೇರಿಕೊಂಡು ಹಲವಾರು ತರಬೇತಿಗಳನ್ನು ಪಡೆದುಕೊಂಡು. ಮೊದಲನೆಯದಾಗಿ ಬ್ಯಾಂಕ್ ಸಾಲ ತೆಗೆದುಕೊಂಡು ಬಟ್ಟೆ ಹೊಲಿಯುವ ಯಂತ್ರ ಖರೀದಿಸಿ, ಬಟ್ಟೆ ಹೊಲಿಯುತ್ತಿದ್ದರು ದಿನಕ್ಕೆ 300 ರಿಂದ 400 ಆದಾಯವಾಗುತದೆ ಎಂದು ತಿಳಿಸಿ ಮತ್ತೆ ಎರಡನೇದಾಗಿ 1,00,000 ಸಾಲ ತೆಗೆದುಕೊಂಡು ಎರಡು ಎತ್ತುಗಳನ್ನು ಖರೀದಿಸಿ ಹೊಲದ ಕೆಲಸಕ್ಕೆ ಉಪಯೋಗಿಸಿಕೊಂಡು ಅದರ ಆದಾಯ ಕೂಡ ತೆಗೆದುಕೊಂಡಿರುತ್ತಾರೆ. ತದನಂತರ ಎತ್ತುಗಳು ಸಹ ಮಾರಿ ದುಡ್ಡನ್ನು ಮನೆ ಕಟ್ಟುವುದುಗೋಸ್ಕರ ಉಪಯೋಗಿಸಿಕೊಂಡಿದ್ದಾರೆ. ಆರ್ಬಿಟ್ ಸಂಸ್ಥೆಯ ಸಹಾಯ: ಸಂಘದ ಸದಸ್ಯರಿಗೆ ಹಲವಾರು ಮಾಹಿತಿ ಮತ್ತು ತರಬೇತಿಗಳನ್ನು ಕೊಡುತ್ತಾ ಸ್ವಉದ್ಯೋಗದಲ್ಲಿ ಯಾವ ರೀತಿಯಾಗಿ ತೊಡಗಬಹುದೆಂದು ಮಾಹಿತಿ ನೀಡುತ್ತಾ ಮಹಿಳೆಯರನ್ನು ಪ್ರೇರೇಪಿಸುತ್ತಾ ಯಾವ ರೀತಿಯಾಗಿ ಅಭಿವೃದ್ಧಿ ಹೊಂದಬೇಕೆಂದು ತಿಳಿಸಿರುತ್ತಾರೆ. ಸದಸ್ಯರ ಅನಿಸಿಕೆ: 11 ವರ್ಷದಿಂದ ಆರ್ಬಿಟ್ ಸಂಸ್ಥೆಯ ಅಡಿಯಲ್ಲಿದ್ದ ಕನಕದಾಸ ಸಂಘಕ್ಕೆ ಸೇರಿಕೊಂಡು ಹಲವಾರು ತರಬೇತಿಗಳನ್ನು ಪಡೆದುಕೊಂಡು ಸ್ವ ಉದ್ಯೋಗದ ಕೆಲಸ ಮಾಡುತ್ತಿದ್ದೇನೆ ನನಗೆ ತುಂಬಾ ಸಂತೋಷವಾಗಿದೆ ಎಂದು ಸಂಸ್ಥೆಗೆ ಧನ್ಯವಾದಗಳು ವ್ಯಕ್ತಪಡಿಸಿದ್ದಾರೆ.

## “ಪಂಚಾಯತ್ ರಾಜ್ ಕುರಿತು ತರಬೇತಿ”



ದಿನಾಂಕ 20 ಮಾರ್ಚ್ 2026ರಂದು ಬಾಲ್ಕಿ ತಾಲೂಕಿನ ಹುಣಜಿ ಗ್ರಾಮದಲ್ಲಿರುವ ಆತ್ಮ ಜ್ಯೋತಿ ಮಹಾಸಂಗದ ಸಭೆಯು ಶ್ರೀಮತಿ ಮರಿಯಾಳು ಪ್ರಾರ್ಥನೆ ಗೀತೆಯೊಂದಿಗೆ ಪ್ರಾರಂಭಿಸಲಾಯಿತು. ಸ್ವಾಗತ ಶ್ರೀಮತಿ ನಾಗಮಣಿಯವರು ಸ್ವಾಗತಿಸಿದರು ಅಂದಿನ ಸಭಾ ಅಧ್ಯಕ್ಷರು ಶ್ರೀಮತಿ ಇಂದುಮತಿ ವಹಿಸಿಕೊಂಡಿದ್ದರು. ಬಂದಿರುವಂತೆ ಕಾರ್ಯಕರ್ತರಿಗೂ ಸಭೆಯಲ್ಲಿ ಭಾಗವಹಿಸುವಂಥ ಎಲ್ಲರನ್ನ ಸ್ವಾಗತಿಸಿದರು. ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀ ಪ್ರಭು ಅವರು ಪಂಚಾಯತ್ ರಾಜ್ ಕುರಿತು ತರಬೇತಿ ಪ್ರಾರಂಭಿಸಿದರು. ಈ ಪಂಚಾಯತ್ ರಾಜ್ ಎಂದರೆ? ಪಂಚಾಯತಿನಲ್ಲಿರುವಂಥ ನಮಗೆ ಸೌಲಭ್ಯಗಳ ಬಗ್ಗೆ ಸ್ಪಷ್ಟವಾಗಿ ನಮಗೆ ಗೊತ್ತಿರಬಹುದು. ಉದಾರಣೆ ಕುಡಿಯುವ ನೀರಿನ ವ್ಯವಸ್ಥೆ, ಬೀದಿ ದೀಪದ ವ್ಯವಸ್ಥೆ, ರಸ್ತೆ ವ್ಯವಸ್ಥೆ ಮತ್ತು ವಸತಿ ಯೋಜನೆ ಇನ್ನು ಅನೇಕ ಯೋಜನೆಗಳನ್ನು ಪಂಚಾಯತ್ ಮುಖಾಂತರ ಪಡೆದುಕೊಳ್ಳುತ್ತೇವೆ. ಅದು ನಮಗೆ ಗೊತ್ತಿರಬೇಕು ಯಾವ ಸಂದರ್ಭದಲ್ಲಿ



ನಾವು ಪಡೆದುಕೊಳ್ಳಬೇಕು ಎಂಬುದನ್ನು ಸ್ಪಷ್ಟವಾಗಿ ನಮಗೆ ಗೊತ್ತಿರಬೇಕು. ಗ್ರಾಮ ಸಭೆಗಳಲ್ಲಿ ಈ ಎಲ್ಲಾ ಯೋಜನೆಗಳ ಬಗ್ಗೆ ಚರ್ಚೆ ಮಾಡಿ ಸೌಲಭ್ಯಗಳನ್ನು ಕೊಡುತ್ತಾರೆ ಅದಕ್ಕೆ ನಾವು ಗ್ರಾಮಸಭೆಗೆ ಹೋಗಬೇಕು. ಅಲ್ಲಿ ನಮ್ಮ ವಿಷಯಗಳನ್ನ ಅರ್ಜಿಗಳ ಮುಖಾಂತರವಾಗಿ ಅಧಿಕಾರಿಗಳಿಗೆ ಕೊಡಬೇಕು. ಅದರ ಬಗ್ಗೆ ಸಭೆಯಲ್ಲಿ ಅವರು ಚರ್ಚಿಸುತ್ತಾರೆ, ನಿರ್ಣಯನ ತೆಗೆದುಕೊಳ್ಳುತ್ತಾರೆ. ಈ ಪಂಚಾಯತ್ ರಾಜ್‌ದಲ್ಲಿ ಇನ್ನು ಅನೇಕ ಸೌಲಭ್ಯಗಳನ್ನ ಕಾಣುತ್ತೇವೆ ಎಂದು ತಿಳಿಸಿ ಮುಂಬರುವ ಚುನಾವಣೆಗಳ ಬಗ್ಗೆ ಮಹಿಳೆಯರು ಭಾಗವಹಿಸಬೇಕು ಮತ್ತು ಚುನಾವಣೆಯಲ್ಲಿ ನಿಲ್ಲಬೇಕು ಎಂದು ತಿಳಿಸಲಾಯಿತು. ಶ್ರೀಮತಿ ಇಂದುಮತಿ ಅವರು ಶಿವಮೊಗ್ಗದಲ್ಲಿ ಪಡೆದುಕೊಂಡು ತರಬೇತಿಯ ಬಗ್ಗೆ ಮಹಾಸಂಗದ ಸಭೆಯಲ್ಲಿ ಹಂಚಿಕೊಂಡಿದ್ದರು. ಸಂಘಗಳು ಮಹಾಸಂಗಗಳು, ತಾಲೂಕ ಒಕ್ಕೂಟಗಳು, ಜಿಲ್ಲಾ ಒಕ್ಕೂಟ ಹಾಗೂ ರಾಜ್ಯ ಒಕ್ಕೂಟ ಬಲಿಷ್ಠವಾಗಿ ಇರಬೇಕಾದರೆ ನಮ್ಮ ಸಂಘಗಳು ಚೆನ್ನಾಗಿ ನಡೆಯಬೇಕು ಎಂದು ತಿಳಿಸಿದರು. ತದನಂತರ ಅಂದಿನ ಸಭೆಯು ಶ್ರೀಮತಿ ಈಶ್ವರಿಯವರು ಧನ್ಯವಾದ ಮೂಲಕ ಮುಕ್ತಾಯ ಮಾಡಲಾಯಿತು. ಸಭೆಯಲ್ಲಿ 14 ಸದಸ್ಯರು ಭಾಗವಹಿಸಿದರು.

## “ಕಿರಣ್ ಜ್ಯೋತಿ ಮಹಾಸಂಗದ ಸಭೆ ಸಂಪನ್ಮೂಲ ಕ್ರೂಡಿಕರಣ ಕುರಿತು ತರಬೇತಿ”



ದಿನಾಂಕ 14 ಮಾರ್ಚ್ 2026ರಂದು ಬಾಲ್ಕಿ ತಾಲೂಕಿನ ಮುರಾಳ ಗ್ರಾಮದಲ್ಲಿರುವ ಕಿರಣ್ ಜ್ಯೋತಿ ಮಹಾಸಂಗದ ಸಭೆಯು ಮಾಡಲಾಯಿತ್ತು. ಶ್ರೀಮತಿ ರೇಣುಕಾ ಅವರು ಪ್ರಾರ್ಥನೆ ಗೀತೆಯೊಂದಿಗೆ ಪ್ರಾರಂಭಿಸಲಾಯಿತು. ಬಂದಿರುವ ಸಂಪನ್ಮೂಲ ವ್ಯಕ್ತಿಗಳಿಗೂ ಕಾರ್ಯಕರ್ತರಿಗೂ ಸಭೆಯಲ್ಲಿ ಭಾಗವಹಿಸುವ ಎಲ್ಲರಿಗೂ ಶ್ರೀಮತಿ ವಿಠಾಬಾಯಿ ಸ್ವಾಗತಿಸಿದರು. ಅಂದಿನ ಸಂಪನ್ಮೂಲ ವ್ಯಕ್ತಿಗಳಾಗಿರುವ ಶ್ರೀಮತಿ ನಿರ್ಮಲ ಮೇಡಂ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು. ಶ್ರೀಮತಿ ನಿರ್ಮಲ ಮೇಡಂ ಅವರು ಸ್ಥಳೀಯ ಸಂಪನ್ಮೂಲ ಕ್ರೂಡಿಕರಣ ಕುರಿತು ತರಬೇತಿಯನ್ನ ಪ್ರಾರಂಭಿಸಿದರು. ಸ್ಥಳೀಯ ಸಂಪನ್ಮೂಲ ಕ್ರೂರಿಕರಣ ಎಂದರೆ ಏನು ಎಂದು ಪ್ರಶ್ನೆ ಕೇಳುತ್ತ ನಾವು ಆದಾಯದಲ್ಲಿ ಪಡುವಂತ ಹಣದಲ್ಲಿ ಸ್ವಲ್ಪ ಕ್ರೂರೀಕರಣ ಮಾಡುವುದು ಮತ್ತು ಸಂಘದಲ್ಲಿ ಮಾಸಂಗದಲ್ಲಿ ತಾಲೂಕು ಒಕ್ಕಟ್ಟದಲ್ಲಿ ಜಿಲ್ಲಾ ಒಕ್ಕೂಟದಲ್ಲಿ ದೇಣಿಗೆಗಾಗಿ ಕೊಡುವುದು ಪ್ರತಿ ಸದಸ್ಯರು ಸಂಸ್ಥೆಗೆ 150 ರೂಪಾಯಿ ಕೊಡುವುದು ಇದು ವರ್ಷದಲ್ಲಿ ಒಂದು ಸಲ ಮಾತ್ರ



ಕೊಡಬೇಕು ಈ ವಿಷಯದ ಬಗ್ಗೆ ವಿಸ್ತಾರವಾಗಿ ತಿಳಿಸಿದರು. ಸ್ಥಳೀಯವಾಗಿ ತಾವು ತಮ್ಮ ಹೊಲಗದ್ದೆಗಳಲ್ಲಿ ಬೆಳೆಯುವ ಬೆಳೆಗಳು ಮಾರಾಟ ಮಾಡುವುದು ಉದಾಹರಣೆ ತರಕಾರಿಗಳು, ಹಣ್ಣುಗಳು, ಜೋಳ, ರಾಗಿ, ಗೋಧಿ ಹಾಗೂ ತೊಗರಿ ಇತ್ಯಾದಿ ಯಾವುದೇ ಇರಲಿ ಅದರಿಂದ ಪಡೆದುಕೊಳ್ಳುವಂತೆ ಲಾಭಾಂಶವನ್ನು ಉಳಿತಾಯ ಮಾಡುದು ಬಹಳ ಮುಖ್ಯವಾಗಿದೆ. ಅದಕ್ಕೋಸ್ಕರ ನಾವು ಈ ಸ್ಥಳೀಯ ಸಂಪನ್ಮೂಲ ಕ್ರೂಡೀಕರಣ ಮಾಡುವುದು ಬಹಳ ಮುಖ್ಯ. ಮತ್ತು ಕಿರಾಣಿ ಅಂಗಡಿ ಆಗಿರಬಹುದು ಅಥವಾ ಯಾವುದೇ ಬಿಜಿನೆಸ್ ಆಗಿರಬಹುದು ಲಾಭಾಂಶ ಬಹಳ ಮುಖ್ಯ ಉಳಿತಾಯನು ಅಷ್ಟೇ ಮುಖ್ಯ. ತುರ್ತು ಸಂದರ್ಭ ಬಂದಲ್ಲಿ ಅಥವಾ ಕಷ್ಟ ಬಂದ ಸಂದರ್ಭದಲ್ಲಿ ಅನಾರೋಗ್ಯ ಸಂದರ್ಭದಲ್ಲಿ ನಮಗೆ ಅದನ್ನ ಉಪಯೋಗಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬುದನ್ನ ತಿಳಿದುಕೊಳ್ಳಬೇಕು. ಮೌಲ್ಯಮಾಪನ ಎಲ್ಲಾ ಸದಸ್ಯರು ಇನ್ನು ಮುಂದೆ ನಾವು ಈ ಸ್ಥಳೀಯ ಸಂಪನ್ಮೂಲ ಕ್ರೂಡೀಕರಣ ಮಾಡುತ್ತೇವೆ ಮತ್ತು ವ್ಯವಸಾಯ ಸಂಘಗಳು ಸಂಸ್ಥೆಗಳಿಗೆ ಹಣವನ್ನು ಕೊಡುತ್ತೇವೆ ಎಂದು ಸಭೆಯಲ್ಲಿ ನಿರ್ಧಾರ ಮಾಡಿದರು. ಅಂದಿನ ಸಭೆಯು ಶ್ರೀಮತಿ ಪಾರ್ವತಿಯವರು ಧನ್ಯವಾದಗಳೊಂದಿಗೆ ಮುಕ್ತಾಯ ಮಾಡಲಾಯಿತು. ಸಭೆಯಲ್ಲಿ 25 ಸದಸ್ಯರು ಹಾಜರಾಗಿದ್ದರು.

## ಸ್ವ-ಉದ್ಯೋಗದಲ್ಲಿ ತೊಡಗಿದ ಮಹಿಳೆ"



ಹಳ್ಳಿಯ ಹೆಸರು: ವಡ್ಡನ್‌ಕೇರ, ಮಾಸಂಗದ ಹೆಸರು: ಕಿರಣ, ತಾಲೂಕ: ಹುಮ್ನಾಬಾದ್ ಜಿಲ್ಲೆ: ಬೀದರ್. ಸಂಘದ ಪರಿಕಲ್ಪನೆ ಗೊತ್ತಿಲ್ಲದ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಯಿಂದ ಸಿಬ್ಬಂದಿಯವರು ಸಂಘವನ್ನು ರಚಿಸಲು. ಸಹಕರಿಸಿದರು ಹಾಗೆ ಮೂರು ಸಂಘಗಳನ್ನು ಒಟ್ಟು ಸೇರಿಸಿ ಮಹಾಸಮದ ಪರಿಕಲ್ಪನೆ ಮಾಹಿತಿ ನೀಡಿ ಮೂರು ಸಂಘಗಳನ್ನು ಒಟ್ಟು ಸೇರಿಸಿ ಕಿರಣ ಮಹಾಸಂಗ ರಚನೆ ಮಾಡಿದರು. ಸುಮಾರು ಎಂಟು ವರ್ಷಗಳಾಯಿತು ಮಹಾಸಂಗ ರಚನೆ ಮಾಡಿ ವಡ್ಡನ್ ಕೆರೆ ಗ್ರಾಮದಲ್ಲಿ 10 ಕುಟುಂಬಗಳಿಗೆ ವಿದ್ಯುತ್ ದೀಪ ಮತ್ತು ವಿದ್ಯುತ್ ಕಂಬಗಳ ಸಮಸ್ಯೆ ತುಂಬಾ ಇತ್ತು. ರಾತ್ರಿ ಸಮಯದಲ್ಲಿ ಹಿರಿಯರಿಗೆ ವೃದ್ಧರಿಗೆ ವೇಸ್ಕರಿಗೆ ಹಾಗೂ ಚಿಕ್ಕ ಮಕ್ಕಳಿಗೆ ರಾತ್ರಿ ಸಮಯದಲ್ಲಿ ಕೂಡ ತುಂಬಾ ಕಷ್ಟಕರವಾಗಿತ್ತು. ದಿನಾಂಕ 13.11.2025 ರಂದು ಈ ಸಮಸ್ಯೆಯ ಕುರಿತು ತಾಳ್ಮಡಗಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅವರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪದೇ ಪದೇ ಭೇಟಿ ನೀಡಿ ಈ ಸಮಸ್ಯೆಯ ಕುರಿತು ಚರ್ಚೆ ಸಹ ಮಾಡಿರುತ್ತಾರೆ. ಆದರೆ ಅವರು ಸ್ಪಂದನೆ ನೀಡದಿದ್ದ ಕಾರಣ 10.10.2026 ರಂದು ವಿದ್ಯುತ್ ಸರಬರಾಜು ಇಲಾಖೆಗೆ ಅರ್ಜಿ ಸಲ್ಲಿಸಿದ್ದಾರೆ. ಹಾಗೆ ಅವರಿಗೆ ಹಳ್ಳಿಗೆ ಬರುವಂತ ಲೈನ್ ಮೆನ್ ಅವರಿಗೂ ಪದೇ ಪದೇ ಕೇಳಿ ಒತ್ತಡ ಹಾಕುವುದರಿಂದ ವಿದ್ಯುತ್ ಸರಬರಾಜು ಇಲಾಚಿ ವತಿಯಿಂದ ಹತ್ತು ಕುಟುಂಬದವರಿಗೆ ಸಹಾಯವಾಗುವಂತೆ ಆರು ವಿದ್ಯುತ್ ಕಂಬಗಳ ವ್ಯವಸ್ಥೆಯನ್ನು ಮಾಡಿಕೊಟ್ಟಿರುತ್ತಾರೆ. ನಮ್ಮ ಓಣಿಯಲ್ಲಿ ವಿದ್ಯುತ್ ಕಂಬಗಳ ವ್ಯವಸ್ಥೆಯನ್ನು ಮಾಡಿಕೊಳ್ಳಲು ಸಹಕರಿಸಿದ ಆರ್ಬಿಟ್ ಸಂಸ್ಥೆಗೆ ನಮ್ಮ ಮಹಾಸಂಗದ ಹಾಗೂ ಸಮುದಾಯದ ಜನರ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು ಸಲ್ಲಿಸುತ್ತೇವೆ.

## "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ"

## "ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಗುವಿನಲ್ಲಾದ ಬದಲವಣೆಗಳ ಯಶಸ್ವಿಯ ಕಥೆ"



ಮಗುವಿನ ಹೆಸರು ರಂಜಿತ್, ಜನ್ಮ ದಿನಾಂಕ ಫೆಬ್ರವರಿ ಎರಡು 2023, ನೊಂದಾವಣಿ ಸಂಖ್ಯೆ-ORT232400066 ಲಿಂಗ-ಗಂಡು, ತಂದೆ ಹೆಸರು-ಆನಂದ, ತಾಯಿಯ ಹೆಸರು-ಸುಧಾರಾಣಿ, ಕುಟುಂಬದ ಪ್ರಕಾರ-ವಿಭಕ್ತ ಕುಟುಂಬ, ವೈಕಲ್ಯದ ಪ್ರಕಾರ-ಮಲ್ಟಿಪಲ್ ಡಿಸೆಬಿಲಿಟಿ, ವಿಳಾಸ-ಹುಣಸಿನಾಳ ತಾಲೂಕ ಹನಾಬಾದ್ ಜಿಲ್ಲಾ ಬೀದರ್, ಗುರುತಿಸಿದ ದಿನಾಂಕ-ಅಕ್ಟೋಬರ್ 30 2023. ಕುಟುಂಬದ ಹಿನ್ನೆಲೆ-ರಂಜಿತ್ ತಂದೆ ಆನಂದ್ ಇವರದು ಬಡ ಕುಟುಂಬ. ಇವರ ಕುಟುಂಬದಲ್ಲಿ ಒಟ್ಟು ನಾಲ್ಕು ಜನ ಸದಸ್ಯರು ವಾಸವಿದ್ದು. ಉಪಜೀವನಕ್ಕಾಗಿ ಒಂದು ಚಹಾ ಹೋಟೆಲ್ ಇಟ್ಟಿಕೊಂಡಿದ್ದಾರೆ. ಜನನ ಮತ್ತು ವೈದ್ಯಕೀಯ ಇತಿಹಾಸ-ಮಗು ಹುಟ್ಟಿದಾಗ ಅತ್ತಿರಲಿಲ್ಲ ತೂಕದಲ್ಲಿ ಕಡಿಮೆ ಇತ್ತು. ಹಸ್ತಕ್ಷೇಪದ ಮೊದಲು ಇರುವ ಸ್ಥಿತಿ-ಮಗು ತುಂಬಾ ಅಳುತ್ತ ಇತ್ತು ಮಗುವಿಗೆ ಅವಧಾನ ನೋಡುವ ಶಕ್ತಿ ಇರಲಿಲ್ಲ. ತಾಯಿಯ ಎದೆ ಹಾಲು ಕುಡಿಯಲಿಕ್ಕೆ ಶಕ್ತಿ ಇರಲಿಲ್ಲ. ಮಗುವಿಗೆ ಉಸಿರಾಟದ ಸಮಸ್ಯೆವಿತ್ತು. ವೈಕುಲ್ಯದ ಗುರುತಿಸುವಿಕೆ-ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರಿಂದ ಮಾಹಿತಿ ಪಡೆದುಕೊಂಡು ಮಗುವನ್ನು ಪತ್ತೆ ಹಚ್ಚಲಾಯಿತು. ಗುರುತಿಸಿದ ಕಷ್ಟದ ಕ್ಷೇತ್ರಗಳು-ಮಗುಗೆ ಉಸಿರಾಟದ ಸಮಸ್ಯೆ, ಅವಧಾನದ ಕೊರತೆ, ಹಾಲು ಕುಡಿಯುವ ಸಮಸ್ಯೆ, ತೂಕದಲ್ಲಿ ಕಡಿಮೆ ಇರುವ ಸಮಸ್ಯೆ, ಶಿಫಾರಸು ಮಾಡಿದ ಹಸ್ತ ಕ್ಷೇಪ-ಮಗುವಿಗೆ ಎಂ.ಆರ್.ಐ ಮಾಡಲು ತಿಳಿಸಲಾಯಿತು. ಆರಂಭಿಕ ಉತ್ತೇಜನ ಚಿಕಿತ್ಸೆ ಚಟುವಟಿಕೆಗಳು-ಮಗುವಿಗೆ ಕುಳಿತುಕೊಳ್ಳಲು ಮಜಲ್ ಟೈಟ ಸಮಸ್ಯೆ ಇತ್ತು. ಅದನ್ನು ನಿಯಂತ್ರಿಸಲು ಮಗುವಿಗೆ ಮಸಾಜ್ ಮಾಡ್ಲಿಕ್ಕೆ ಹೇಳಲಾಯಿತು. ಬಣ್ಣ ಬಣ್ಣದ ಚಿತ್ರ ತೆಗೆದುಕೊಂಡು ಮಗುವಿನ ಕಣ್ಣು ಮುಂದೆ ಹಾಯಿಸಲಾಯಿತು. ಕೆಲವು ಧ್ವನಿ ಮಾಡುವ ಶಬ್ದಮಾಡುವ ಉಪಕರಣಗಳನ್ನು ಬಳಸಲಾಯಿತು. ಗುರುತಿಸುವಂತೆ ಮಾಡಲಾಯಿತು. ಸಹಾಯಕ ಸಾಧನ ಮತ್ತು ಉಪಕರಣಗಳು-ಮಗುವಿಗೆ ಕುಳಿತುಕೊಳ್ಳಲು ಸಂಸ್ಥೆಯಿಂದ ಕಾರ್ನರ್ ಚೇರ್ ನೀಡಲಾಗಿದೆ. ಸಾಮಾಜಿಕ ಭದ್ರತಾ ಸಹಾಯ-ಮಗುವಿಗೆ ಆಧಾರ್ ಕಾರ್ಡ್ ಮಾಡಿಸಲಾಯಿತು. ಹಾಗೂ ಅಂಗ ವೈಕಲಿತೆ ಪ್ರಮಾಣ ಪತ್ರ ಅರ್ಜಿ ಹಾಕಲಾಗಿದೆ. ಪೋಷಕರ ಸಹಾಯ-ನಾವು ಹೇಳಿರುವ ಎಲ್ಲಾ ರೀತಿಯ ಚಟುವಟಿಕೆಗಳು ಪೋಷಕರು ದಿನ ನಿತ್ಯ ಮನೆಯಲ್ಲಿ ಮಾಡಿ ಮಾಡುತ್ತಾರೆ. ಅಂಗನವಾಡಿ ಹಸ್ತಕ್ಷೇಪ-ಅಂಗನವಾಡಿಯಲ್ಲಿ ಬೇರೆ ಮಕ್ಕಳೊಂದಿಗೆ ಇರುವಾಗ ಚಟುವಟಿಕೆಯನ್ನು ಮಾಡಿಸುತ್ತೇವೆ. ಹಸ್ತಕ್ಷೇಪ ಮತ್ತು ಚಟುವಟಿಕೆಗಳು ಮಗುವಿಗೆ ಸ್ನಾಯುಗಳ ಗಟ್ಟಿ ಇರುವುದರಿಂದ. ಸಡಿಲು ಮಾಡುವ ಚಟುವಟಿಕೆ ಮಾಡುತ್ತೇವೆ. ಮಗುವಿನ ಏಕಾಗ್ರತೆ ಗೋಸ್ಕರ ಬಣ್ಣ ಬಣ್ಣದ ವಸ್ತುಗಳನ್ನ ಕಣ್ಣೆದುರಿಗೆ ಹಾಯಿಸಿದ್ದೇವೆ. ಶಬ್ದ ಮಾಡುವಂತಹ ಉಪಕರಣ ತೆಗೆದುಕೊಂಡು ಮಗುವನ್ನು ಕೇಳುವಂತ ಚಟುವಟಿಕೆ ಮಾಡಿಸುತ್ತೇವೆ. ಪ್ರಗತಿ ಮತ್ತು ಫಲಿತಾಂಶಗಳು-ಮಗುವಿಗೆ ಉಸಿರಾಟದ ಸಮಸ್ಯೆ ಸ್ವಲ್ಪ ಕಡಿಮೆಯಾಗಿದೆ. ಮಗು ಅಳುವುದನ್ನು ನಿಲ್ಲಿಸಿದೆ. ತಾಯಿ ಮತ್ತು ತಂದೆಯವರ ಧ್ವನಿಗಳಿಗೆ ಕ್ರಿಯೆಗೆ ಪ್ರತ್ರಿಯೆ ನೀಡುತ್ತಿದ್ದಾನೆ. ಮಗುವಿನ ಸ್ನಾಯುಗಳು ಸ್ವಲ್ಪಮಟ್ಟಿಗೆ ಸಡಿಲವಾಗಿವೆ. ಪೋಷಕರ ಕುಟುಂಬದ ಭಾಗವಿಸುವಿಕೆ-ಪೋಷಕರು ಚುರುಕಾಗಿ ಭಾಗವಹಿಸುತ್ತಾರೆ. ಸಾರಾಂಶ ರಂಜಿತ್ ತಂದೆ ಆನಂದ್ ಇವರದು ಬಡ ಕುಟುಂಬ. ಇವನಿಗೆ ಒಬ್ಬ ಅಣ್ಣನಿದ್ದಾನೆ. ತಂದೆ ಊರಲ್ಲಿಯೇ ಒಂದು ಚಹ ಅಂಗಡಿಯಿಂದ ಉಪಜೀವನವನ್ನು ನಡೆಸುತ್ತಿದ್ದಾರೆ. ತಾಯಿ ಗ್ರಹಿಣಿಯಾಗಿದ್ದು. ಈ ಮಗುವನ್ನು ನೋಡಿಕೊಳ್ಳುತ್ತಾರೆ. ಇವರ ಕುಟುಂಬದಲ್ಲಿ ಒಟ್ಟು ನಾಲ್ಕು ಜನ ಸದಸ್ಯರಿದ್ದಾರೆ.

## "ದುಮ್ಮನ್ಸೂರ್ ಗ್ರಾಮದ ಉಪ ಕೇಂದ್ರದಲ್ಲಿ ಮಕ್ಕಳ ಪೋಷಕರ ಸಭೆ"



07 ಮಾರ್ಚ್ 2026ರಂದು ಹುಮ್ನಾಬಾದ್ ತಾಲೂಕಿನ ಹೊರವಲಯದ ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು ದುಮ್ಮನ್ಸೂರ್ ಗ್ರಾಮದ ಉಪ ಕೇಂದ್ರದಲ್ಲಿ ಮಕ್ಕಳ ಪೋಷಕರ ಸಭೆಯ ತರಬೇತಿಯನ್ನು ಆಚರಿಸಲಾಯಿತು. ಸಭೆಯಲ್ಲಿ ಐದು ಜನ ಮಕ್ಕಳ ಪೋಷಕರು ಭಾಗವಹಿಸಿದರು. ರೂಟೀನ್ ಬಗ್ಗೆ ಚಟುವಟಿಕೆ ಮಾಡುವುದನ್ನೂ ತರಬೇತಿಯಲ್ಲಿ ತಿಳಿಸಲಾಯಿತು. ರೂಟಿನ್ ಎಂದರೆ ಬಹಳಷ್ಟು ಮಕ್ಕಳು ಆತಂಕ ಅನುಭವಿಸುತ್ತಾರೆ, ವಿಶೇಷವಾಗಿ ಆರ್ಟಿಸಂ ಜಿ.ಡಿ.ಡಿ ಡೌನ್ ಸಿಂಡ್ರಮ್ ಸಿಪಿ ಮಕ್ಕಳು ಬಹಳ ಆತಂಕಗಳ ಒಳಗಾಗುತ್ತಾರೆ. ರೂಟೀನ್ ಇಲ್ಲದಿದ್ದರೆ ಮಗುವಿಗೆ ಮುಂದೇನಾಗುವುದು ಎಂದು ತಿಳಿಯದು, ಆತಂಕ ಹೆಚ್ಚಾಗುತ್ತದೆ ನಿದ್ರೆ ಸಮಸ್ಯೆ, ಊಟ ತೊಂದರೆ, ಪಾಲಕರ ಒತ್ತಡ, ಇವುಗಳು ಮಗುವಿಗೆ ಕಿರಿಕಿರಿ ಆಗುವಂತಹದ್ದು. ರೋಟಿನ್ ಕೆಲವು ಲಾಭಗಳು ಯಾವ್ಯಾವು ಅಂದರೆ ಆತಂಕ ಕಡಿಮೆ, ವರ್ತನೆ ಸುಧಾರಣೆ, ನಿದ್ರೆ ಉತ್ತಮ, ರೂಟೀನ್ ಮಕ್ಕಳಿಗೆ ನಾವು ಒಂದೇ ದಿನಕ್ಕೆ ನಾಲ್ಕು ಐದು ಚಟುವಟಿಕೆಗಳನ್ನ ಹೇಳಿಕೊಟ್ಟರೆ ಆ ಮಗು ತಿಳಿದುಕೊಳ್ಳಲು ಸಾಧ್ಯವಿಲ್ಲ ಆದ್ದರಿಂದ ಮಗುವಿಗೆ ಏನೇ ಚಟುವಟಿಕೆ ಮಾಡಿಸಬೇಕಾದರೆ ಒಂದೊಂದಾಗಿ ಆಟದ ಮುಖಾಂತರ ಮಗುವಿಗೆ ಹೇಳಿಕೊಡಬೇಕು. ಉದಾ: ಫೋಟೋಸ್‌ಗಳು ಅಥವಾ ಚಿತ್ರ ತೋರಿಸಿ ಮಗುವಿಗೆ ಚಟುವಟಿಕೆಗಳು ಮಾಡಿಸಬೇಕೆಂದು ಪೋಷಕರಿಗೆ ತಿಳಿಸಲಾಯಿತು. ಹಾಗೂ ಮಗುವಿಗೆ ಬೆಳಗಿನ ಜಾವದಲ್ಲಿ ಕೆಲವು ಚಟುವಟಿಕೆಗಳನ್ನು ರೂಡಿ ಮಾಡಿಸುವಂತದ್ದು. ಒಂದೇ ಸಮಯದಲ್ಲಿ ಎದ್ದು ಬರುವುದು, ಟಾಯ್ಲೆಟ್ ಹೋಗೋದು, ಹಲ್ಲು ತೊಳೆಯುವುದು, ಬಟ್ಟೆ ಧರಿಸುವುದು, ಬೆಳಗಿನ ಉಪಹಾರ ಸೇವನೆ ಮಾಡುವಂಥದ್ದು. ಮಗುವಿಗೆ ಪ್ರತಿದಿನ ಹೇಳಿಕೊಡುವಂಥದ್ದು ಹಾಗೂ ಅಂಗನವಾಡಿಯಲ್ಲಿ, ಮಕ್ಕಳ ಜೊತೆ ಬೆರೆತು ಆಟ ಆಡುವುದು ಮತ್ತು ಕುಟುಂಬದ ಜೊತೆ ಮಗು ಬೆರೆತು ಆಟ ಆಡುವಂತದ್ದು ಅಜ್ಜಿ, ತಾತ, ಅಮ್ಮ, ಅಪ್ಪ, ಸಹೋದರ ಹಾಗೂ ಸಹೋದರಿಯರ ಜೊತೆಯಲ್ಲಿ ಸೇರಿ ಆಟ ಆಡುವಂತೆ ಮಾಡಲು ಪೋಷಕರಿಗೆ ರೂಟೀನ್ ಬಗ್ಗೆ ತರಬೇತಿಯಲ್ಲಿ ಮಾಹಿತಿ ತಿಳಿಸಿ ಕಾರ್ಯಕ್ರಮವನ್ನು ಮುಕ್ತಾಯ ಮಾಡಲಾಯಿತು.

## "ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳಿಗೆ ಉಪ ಕೇಂದ್ರದಲ್ಲಿ ಚಟುವಟಿಕೆ"



17 ಮಾರ್ಚ್ 2026ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ (ಬಿ) ಗ್ರಾಮದ ಉಪ ಕೇಂದ್ರದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಉಪ ಕೇಂದ್ರದಲ್ಲಿ ಚಟುವಟಿಕೆಗಳನ್ನ ಹಮ್ಮಿಕೊಳ್ಳಲಾಯಿತು. ಇದೇ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತರಾದ ಸುರೇಖಾ ರವರು ಸಹ ಭಾಗವಹಿಸಿ ಮಕ್ಕಳಿಗೆ ಚಟುವಟಿಕೆ ಮಾಡಿಸುವಲ್ಲಿ ಸಹಕಾರವನ್ನು ನೀಡಿದರು. ಸಾಮಾನ್ಯ ಮಕ್ಕಳೊಂದಿಗೆ ಬೆರೆತು ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳಿಗೆ ಎರಡು ಅಕ್ಷರದ ಶಬ್ದಗಳು ಮೂರಕ್ಷರದ ಶಬ್ದಗಳಿಂದ ಉಚ್ಚಾರಣೆ ಮಾಡಲು ಪ್ರಾಯೋಗಿಕವಾಗಿ ತಿಳಿಸಲಾಯಿತು. ಯಾವ ಅಕ್ಷರಗಳು ಗಂಟಲಿಂದ ನಾಲಿಗೆಯಿಂದ ಉಚ್ಚಾರಣೆ ಆಗುತ್ತವೆ ಅನ್ನುವುದರ ಕುರಿತು ಮಾಹಿತಿಯನ್ನು ನೀಡಲಾಯಿತು. ವಸ್ತುಗಳನ್ನು ಒಂದು ಕೈಯಿಂದ ಇನ್ನೊಂದು ಕೈಗೆ ಬದಲಾವಣೆ ಮಾಡುವಂತಹ ಚಟುವಟಿಕೆಗಳು ಕುರಿತು ಮಾಹಿತಿ ನೀಡಲಾಯಿತು. ಮಕ್ಕಳಿಗೆ ಪ್ರಾಥಮಿಕವಾಗಿ ಬಣ್ಣಗಳನ್ನು ಗುರುತಿಸುವ ಚಟುವಟಿಕೆ ನೀಡಲಾಯಿತು. ಜೊತೆಗೆ ಮಕ್ಕಳಿಗೆ ಸಾಮಾನ್ಯ ಮಕ್ಕಳು ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳಿಗೆ ಪರಸ್ಪರವಾಗಿ ಸಹಾಯವನ್ನು ಮಾಡಬೇಕೆಂದು ಅಂಗನವಾಡಿ ಕಾರ್ಯಕರ್ತರು ಮಕ್ಕಳಿಗೆ ಮಾಹಿತಿಯನ್ನು ನೀಡಿದರು. ಮಕ್ಕಳಿಗೆ ಆಟದ ಜೊತೆಗೆ ದಹಿಕವಾಗಿ ಬದಲಾವಣೆಯನ್ನು ಹೊಂದಬಹುದೆಂದು ಮಾಹಿತಿ ತಿಳಿಸಲಾಯಿತು.

# "ನವಜೀವನ ಆರ್ಬಿಟ್ ಕಾರ್ಯಕ್ರಮ"

## "ಜೈ ಭವಾನಿ ವಿಶೇಷ ವಿಕಲ ಚೇತನರ ಸಂಘದ ಸಭೆ ಮತ್ತು ಸರ್ಕಾರದ ವಿವಿಧ ಯೋಜನೆಗಳ ಮಾಹಿತಿ"



ದಿನಾಂಕ 20 ಮಾರ್ಚ್ 2026ರಂದು ಹುಮನಾಬಾದ್ ತಾಲೂಕಿನ ಓತಗಿ ಗ್ರಾಮದಲ್ಲಿ, ಆರ್ಬಿಟ್ ಸಂಸ್ಥೆಯ ಸಂಯುಕ್ತಾಶ್ರದಲ್ಲಿ, ಜೈ ಭವಾನಿ ವಿಶೇಷ ವಿಕಲ ಚೇತನರ ಸಂಘದ ಸಭೆಯು ಯಶಸ್ವಿಯಾಗಿ ನೆರವೇರಿತು. ಈ ಸಭೆಗೆ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಪೂಜಾ ರವರು ಸಭೆಯ ಉದ್ದೇಶವನ್ನು ತಿಳಿಸುತ್ತಾ, ಅಂಗವಿಕಲ ಸೌಲಭ್ಯ ಆರೋಗ್ಯ ಸೇವೆಗಳು ಶಿಕ್ಷಣ ಸಾರಿಗೆ ಸೌಲಭ್ಯಗಳ ಬಗ್ಗೆ ಸದಸ್ಯರು ತಮ್ಮ ಅಗತ್ಯಗಳನ್ನು ತಿಳಿಸಿದರು. ಸರ್ಕಾರ ನೀಡುತ್ತಿರುವ ವಿವಿಧ ಯೋಜನೆಗಳ ಮಾಹಿತಿ ವಿತರಣೆ ಯುಡಿಐಡಿ ಕಾರ್ಡ್, ಡಿಸೆಬಿಲಿಟಿ ಪೆನ್ಷನ್ ಸಹಾಯಕ ಉಪಕರಣಗಳ ವಿತರಣೆ ಚಿಕಿತ್ಸೆ ಮತ್ತು ಪುನರ್ವಸತಿ ಸಂಬಂಧಿಸಿದ ಮಾಹಿತಿಯನ್ನು ಸದಸ್ಯರಿಗೆ ನೀಡಲಾಯಿತು. ಪೋಷಕರಿಗೆ ಮಾರ್ಗದರ್ಶನ ಮಕ್ಕಳ ಆರೈಕೆ ವಿದ್ಯಾಭ್ಯಾಸ ಥೆರಪಿ ಮತ್ತು ದಿನನಿತ್ಯದ ಸಹಾಯಗಾರಿಕೆ ಬಗ್ಗೆ ಸಲಹೆ ನೀಡಲಾಯಿತು. ಒಟ್ಟು 05 ಜನ ಫಲಾನುಭವಿಗಳು ಮತ್ತು ಪೋಷಕರು ಭಾಗವಹಿಸಿದರು.

## "ಮಾನಸಿಕ ಅಸ್ವಸ್ಥರ ಮನೆ ಭೇಟಿ ಮತ್ತು ಆಪ್ತ ಸಮಾಲೋಚನೆ"



28 ಮಾರ್ಚ್ 2026ರಂದು ಹುಮನಾಬಾದ ತಾಲೂಕಿನ ಹಳ್ಳಿಖೇಡ (ಬಿ) ಗ್ರಾಮದ ಫಲಾನುಭವಿಯ ಮನೆ ಭೇಟಿಮಾಡಿ ಆಪ್ತ ಸಮಾಲೋಚನೆಗೆ ಒಳಪಡಿಸಲಾಯಿತು. ಫಲಾನುಭವಿಗೆ ಮನೆಯ ದಿನ ನಿತ್ಯದ ಕೆಲಸದಲ್ಲಿ ಭಾಗವಹಿಸಲು ಹಾಗೂ ಸಮುದಾಯದ ಜನರೊಂದಿಗೆ ಬೆರೆಯಲು ಸಲಹೆ ನೀಡಲಾಯಿತು. ಮತ್ತು ದಿನನಿತ್ಯದ ಚಟುವಟಿಕೆಗಳಲ್ಲಿ ತಮ್ಮ ಕೆಲಸ ತಾವೇ ಮಾಡಿಕೊಳ್ಳಬೇಕು ಎಂದು ಮಾರ್ಗದರ್ಶನ ಮಾಡಲಾಯಿತು. ವರದಿಗಾರರು: ನೀಲಕಂಠ



23 ಮಾರ್ಚ್ 2026ರಂದು ಹುಮ್ನಾಬಾದ್ ತಾಲೂಕಿನ ಕಲ್ಲೂರ ಗ್ರಾಮದಲ್ಲಿರುವ ಫಲಾನುಭವಿಯ ಮನೆ ಭೇಟಿಮಾಡಿ ಕುಮಾರ ಕರ್ಬಸಪ್ಪ ತಂದೆ ಚಂದ್ರಪ್ಪ ಅವರಿಗೆ ಆಪ್ತ ಸಮಾಲೋಚನೆಗೆ ಒಳಪಡಿಸಲಾಯಿತು. ವೈದ್ಯರ ಸಲಹೆ ಮೇರೆಗೆ ನಿರಂತರವಾಗಿ ಮಾತ್ರೆಗಳನ್ನು ಸೇವನೆ ಮಾಡಬೇಕು ಮತ್ತು, ಜನರೊಂದಿಗೆ ಬೆರೆಯುವುದರಿಂದ ಸಹ ಖಿನ್ನತೆಯ ಲಕ್ಷಣಗಳು ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಮತ್ತು ದಿನನಿತ್ಯದ ಚಟುವಟಿಕೆಯಲ್ಲಿ ಭಾಗವಹಿಸಿ ಮನೆಯ ಕೆಲಸ ಕಾರ್ಯಗಳಲ್ಲಿ ಪಾಲ್ಗೊಳ್ಳಬೇಕು ಎಂದು ಆಪ್ತ ಸಮಾಲೋಚನೆಯಲ್ಲಿ ಮಾಹಿತಿ ನೀಡಲಾಯಿತು. ನಿಮಗೆ ಕೊಟ್ಟಿರುವ ಎರಡು ಕುರಿಗಳು ಚೆನ್ನಾಗಿ ಮೈಯಿಸಿ ಅವುಗಳಿಂದ ಬಂದ ಲಾಭವನ್ನು ನಿಮ್ಮ ಜೀವನ ಉಪಯೋಗಕ್ಕೆ ಮಾಡಿಕೊಳ್ಳಿ ಎಂದು ತಿಳಿಸಿದ್ದರು. ವರದಿಗಾರರು: ಶ್ರೀಮತಿ ಮಹಾದೇವಿ

## "ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ"

### "ಮಾನಸಿಕ ಆರೋಗ್ಯವು ದೈಹಿಕ ಆರೋಗ್ಯದಷ್ಟೇ ಮಹತ್ವದ್ದಾಗಿದೆ"



05 ಮಾರ್ಚ್ 2026ರಂದು ಔರಾದ್ (ಬಿ) ತಾಲುಕಿನ ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ ಮಾನಸಿಕ–ಸಾಮಾಜಿಕ ಶಿಕ್ಷಣ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮವನ್ನು ಆರ್ಬಿಟ್ ವತಿಯಿಂದ ಲೀವ್.ಲವ್.ಲಾಫ ಸಹಯೋಗದಲ್ಲಿ ಆಯೋಜಿಸಲಾಯಿತು. ಆಪ್ತ ಸಮಾಲೋಚಕರಾದ ಶ್ರೀಮತಿ ರೂಪಾಲಿ ಸಾಲಗಾರೆ ಅವರು ಮಾನಸಿಕ ಸಾಮಾಜಿಕ ಶಿಕ್ಷಣ ಸತ್ರವನ್ನು ನಡೆಸಿ, ಫಲಾನುಭವಿಗಳು ಹಾಗೂ ಆರೈಕೆದಾರರಿಗೆ ತರಬೇತಿ ನೀಡಿದರು. ಮಾನಸಿಕ ಆರೋಗ್ಯವು ದೈಹಿಕ ಆರೋಗ್ಯದಷ್ಟೇ ಮಹತ್ವದ್ದಾಗಿದೆ. ಏಕೆಂದರೆ ಅದು ನಮ್ಮ ದಿನನಿತ್ಯದ ಜೀವನದಲ್ಲಿ ನಾವು ಹೇಗೆ ಯೋಚಿಸುತ್ತೇವೆ, ಭಾವಿಸುತ್ತೇವೆ ಮತ್ತು ವರ್ತಿಸುತ್ತೇವೆ ಎಂಬುದನ್ನು ಪ್ರಭಾವಿಸುತ್ತದೆ. ಒಬ್ಬ ವ್ಯಕ್ತಿ ನಿರಂತರ ದುಃಖ, ಭಯ, ಒತ್ತಡ ಅಥವಾ ಆಸಕ್ತಿ ಕಳೆದುಕೊಳ್ಳುವಂತಹ ಅನುಭವಗಳನ್ನು ಹೊಂದಿದಾಗ ಅವು ದುರ್ಬಲತೆಗಳಲ್ಲ ಬೆಂಬಲ ಮತ್ತು ಚಿಕಿತ್ಸೆಯ ಅಗತ್ಯವಿರುವ ಲಕ್ಷಣಗಳೆಂದು ಅರ್ಥಮಾಡಿಕೊಳ್ಳುವುದು ಅತ್ಯಂತ ಮುಖ್ಯ. ಒತ್ತಡವನ್ನು ಕಡಿಮೆ ಮಾಡಲು ಮತ್ತು ಭಾವನಾತ್ಮಕ ಸಮತೋಲನವನ್ನು ಸುಧಾರಿಸಲು ಸರಳ ಉಸಿರಾಟ ವ್ಯಾಯಾಮಗಳು ಹಾಗೂ ವಿಶ್ರಾಂತಿ ತಂತ್ರಗಳು ಹೇಗೆ ಸಹಾಯ ಮಾಡುತ್ತವೆ ಎಂಬುದನ್ನು ತೋರಿಸಲು ನಾನು ಸಣ್ಣ ಯೋಗ ಪ್ರದರ್ಶನವನ್ನು ಕೂಡ ನಡೆಸಿದೆ. ಯೋಗವನ್ನು ನಿಯಮಿತವಾಗಿ ಅಭ್ಯಾಸ ಮಾಡುವುದು, ಔಷಧೋಪಚಾರ, ಸಮಾಲೋಚನೆ ಮತ್ತು ಕುಟುಂಬದ ಬೆಂಬಲದ ಜೊತೆಗೆ ಮಾನಸಿಕ ಆರೋಗ್ಯವನ್ನು ಬಹಳ ಮಟ್ಟಿಗೆ ಸುಧಾರಿಸಲು ಸಹಾಯಕವಾಗುತ್ತದೆ.

### "ಸೈಕೋ–ಸೋಶಿಯಲ್ ಎಜುಕೇಶನ್ ಕಾರ್ಯಕ್ರಮ"



06 ಮಾರ್ಚ್ 2026ರಂದು ಭಾಲ್ಕಿ ತಾಲೂಕಿನ ಚಿಟ್ಟಾ ಗ್ರಾಮದಲ್ಲಿ ಸೈಕೋ–ಸೋಶಿಯಲ್ ಎಜುಕೇಶನ್ ಕಾರ್ಯಕ್ರಮವನ್ನು ಅವರಿಂದ ಆರ್ಬಿಟ್ ವತಿಯಿಂದ ಲೀವ್.ಲವ್.ಲಾಫ್ ಸಹಯೋಗದಲ್ಲಿ ಆಯೋಜಿಸಲಾಯಿತು. ಈ ಕಾರ್ಯಕ್ರಮವನ್ನು ಸಮಾಲೋಚಕಿ ಶ್ರೀಮತಿ ರೂಪಾಲಿ ಸಾಲಗಾರೆ ಅವರು ನಡೆಸಿ, ಫಲಾನುಭವಿಗಳು ಮತ್ತು ಪಾಲಕರಿಗೆ ತರಬೇತಿ ನೀಡಿದರು. ಮಾನಸಿಕ ಆರೋಗ್ಯವು ದೈಹಿಕ ಆರೋಗ್ಯದಷ್ಟೇ ಮಹತ್ವದ್ದಾಗಿದೆ. ದೈನಂದಿನ ಜೀವನ ನಡೆಸಲು ದೈಹಿಕ ಆರೋಗ್ಯದ ಮಹತ್ವದ ಕುರಿತು ಹಾಗೂ ಅದರ ಸಂಬಂಧಿತ ವಿಷಯಗಳ ಬಗ್ಗೆ ವಿವರಿಸಲಾಯಿತು. ಒಬ್ಬ ವ್ಯಕ್ತಿಗೆ ನಿರಂತರ ದುಃಖ, ಭಯ, ಒತ್ತಡ ಅಥವಾ ಆಸಕ್ತಿ ಕಳೆದುಕೊಳ್ಳುವ ಲಕ್ಷಣಗಳು ಕಂಡುಬಂದಾಗ, ಅವು ದುರ್ಬಲತೆಯ ಲಕ್ಷಣಗಳಲ್ಲ; ಅವು ಸಹಾಯ ಮತ್ತು ಚಿಕಿತ್ಸೆಯ ಅಗತ್ಯವಿದೆ ಎಂಬುದನ್ನು ಅರಿಯುವುದು ಮುಖ್ಯವೆಂದು ತಿಳಿಸಲಾಯಿತು. ಇದರ ಜೊತೆಗೆ ಸರಳ ಉಸಿರಾಟ ವ್ಯಾಯಾಮಗಳು ಮತ್ತು ವಿಶ್ರಾಂತಿ ತಂತ್ರಗಳು ಒತ್ತಡವನ್ನು ಕಡಿಮೆ ಮಾಡಿ ಭಾವನಾತ್ಮಕ ಸಮತೋಲನವನ್ನು ಸುಧಾರಿಸಲು ಸಹಾಯ ಮಾಡುತ್ತವೆ ಎಂಬುದನ್ನು ಸಣ್ಣ ಯೋಗ ಪ್ರದರ್ಶನ ಮೂಲಕ ತಿಳಿಸಲಾಯಿತು.

## “ಸೈಕೋ–ಸೋಶಿಯಲ್ ಎಜುಕೇಶನ್ ಕಾರ್ಯಕ್ರಮ”



ದಿನಾಂಕ 10 ಮಾರ್ಚ್ 2026 ಭಾಲ್ಕಿ ಸರ್ಕಾರಿ ಆಸ್ಪತ್ರೆಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೈಕೋ ಸೋಶಿಯಲ್ ಎಜುಕೇಶನ್ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮವನ್ನು ಆರ್ಬಿಟ್ ಸಂಸ್ಥೆ ಹಾಗೂ ಲೀವ್.ಲವ್.ಲಾಫ್ ಫೌಂಡೇಶನ್ ಅವರ ಸಹಯೋಗದಲ್ಲಿ ನಡೆಸಲಾಯಿತು. ಸಮಾಲೋಚಕಿ ಶ್ರೀಮತಿ ರೂಪಾಲಿ ಅವರು ಸೈಕೋ–ಸೋಶಿಯಲ್ ಎಜುಕೇಶನ್ ಅಧಿವೇಶನವನ್ನು ನಡೆಸಿ ಫಲಾನುಭವಿಗಳು ಹಾಗೂ ಅವರ ಆರೈಕೆದಾರರಿಗೆ ತರಬೇತಿ ನೀಡಿದರು. ಈ ಸಂದರ್ಭದಲ್ಲಿ ಸರಳ ಉಸಿರಾಟ ವ್ಯಾಯಾಮಗಳು ಮತ್ತು ವಿಶ್ರಾಂತಿ ತಂತ್ರಗಳು ಒತ್ತಡವನ್ನು ಕಡಿಮೆ ಮಾಡಲು ಮತ್ತು ಭಾವನಾತ್ಮಕ ಸಮತೋಲನವನ್ನು ಸುಧಾರಿಸಲು ಹೇಗೆ ಸಹಾಯ ಮಾಡುತ್ತವೆ ಎಂಬುದನ್ನು ತೋರಿಸಲು ಚಿಕ್ಕ ಯೋಗ ಪ್ರದರ್ಶನವೂ ನಡೆಸಲಾಯಿತು. ನಿಯಮಿತವಾಗಿ ಯೋಗಾಭ್ಯಾಸ ಮಾಡುವುದರಿಂದ, ಔಷಧಿ ಸೇವನೆ, ಸಮಾಲೋಚನೆ ಮತ್ತು ಕುಟುಂಬದ ಬೆಂಬಲದೊಂದಿಗೆ ಮಾನಸಿಕ ಆರೋಗ್ಯವನ್ನು ಬಹಳ ಮಟ್ಟಿಗೆ ಸುಧಾರಿಸಬಹುದು ಎಂದು ತಿಳಿಸಲಾಯಿತು.

## “ಶಿವಾ ವಿಶೇಷ ಚೇತನರ ಸಭೆ ಐದು ಶೇಕಡ ಮೀಸಲಾತಿ”



ಮಾರ್ಚ್ 06 ರಂದು ಬಸವಕಲ್ಯಾಣ ತಾಲೂಕಿನ ಧನ್ನೂರ್ (ಆರ್) ಗ್ರಾಮದಲ್ಲಿ, ಆರ್ಬಿಟ್ ಸಂಸ್ಥೆಯ ಲಿವ್.ಲವ್.ಲಾಫ್ ಇವರ ಸಂಯುಕ್ತಾಶ್ರಯದಲ್ಲಿ ಶಿವಾ ವಿಶೇಷ ಚೇತನರ ಸಭೆಯನ್ನು ನಡೆಸಲಾಯಿತು. ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಜಯಕುಮಾರ್ ಅವರು ಮಾತನಾಡಿ, ವಿಶೇಷ ಚೇತನರ ಸಭೆಯನ್ನು ಉದ್ದೇಶಿಸಿ ಮಾತನಾಡಿ, ಸಭೆಗೆ ಹಾಜರಾದ ಎಲ್ಲ ಫಲಾನುಭವಿಗಳ ಆರೋಗ್ಯವನ್ನು ವಿಚಾರಿಸಿ, ಅವರಿಗೆ ವಿಕಲಚೇತನರ ಹಕ್ಕುಗಳು ಹಾಗೂ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿ, ಸರ್ಕಾರದಿಂದ ಸಿಗುವಂತಹ ಐದು ಶೇಕಡ ಮೀಸಲಾತಿಯನ್ನು ವಿವರವಾಗಿ ತಿಳಿಸಲಾಯಿತು. ಯುಡಿಐಡಿ ಕಾರ್ಡ್, ಮಾಸಿಕ ವೇತನ, ಉಚಿತವಾಗಿ ಪಡೆದುಕೊಳ್ಳಬೇಕು. ಗ್ರಾಮ ಪಂಚಾಯತ್ ನಲ್ಲಿ ಬೇಸಿಗೆ ಕಾಲದಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ವಿಶೇಷ ಚೇತನರಿಗೆ, ವಿಶೇಷ ಕಾರ್ಡ್ ಪಡೆದುಕೊಳ್ಳಬೇಕು, ಈ ಕಾಮಗಾರಿಯಲ್ಲಿ ಕೆಲಸ ಮಾಡದಿದ್ದರೂ, ಸಹ ನೇರವಾಗಿ ಹಣಸಂದಾಯ ವಾಗುತ್ತದೆ, ಎಂದು ಮಾಹಿತಿ ನೀಡಲಾಯಿತು. ಈ ಸಭೆಯಲ್ಲಿ ಒಟ್ಟು 07 ಜನರು ಭಾಗವಹಿಸಿ ಇದರ ಸದುಪಯೋಗ ಪಡಿಸಿಕೊಂಡರು.

## “ಜೈ ಭವಾನಿ ಹಾರೈಕೆದಾರರ ಸಭೆ”



ದಿನಾಂಕ 04 ಮಾರ್ಚ್ 2026ರಂದು ಆರ್ಬಿಟ್ ಸಂಸ್ಥೆ ನವಜೀವನ ಲಿವ್.ಲವ್.ಲಾಫ್ ಕಾರ್ಯಕ್ರಮದ ಕಾರ್ಯಕರ್ತ ಶ್ರೀಮತಿ ಕಲ್ಪನಾ ರವರು ಜೈ ಭವಾನಿ ಹಾರೈಕೆದಾರರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಈ ಒಂದು ಸಭೆಯಲ್ಲಿ ಮೊದಲು ಎಲ್ಲರ ಆರೋಗ್ಯವನ್ನು ವಿಚಾರಿಸಲಾಯಿತು. ನಾವು ನಮ್ಮ ಫಲಾನುಭವಿಗಳನ್ನು ಯಾವ ರೀತಿ ನೋಡಿಕೊಳ್ಳುತ್ತೇವೆ ಎಂಬುದರ ಬಗ್ಗೆ ತಿಳಿಸುತ್ತಾ, ಆರೈಕೆದಾರರ ಹೊರೆ ಕಡಿಮೆ ಮಾಡುವುದು, ಅನಾರೋಗ್ಯದ ತಿಳುವಳಿಕೆಯನ್ನು ಸುಧಾರಿಸುವುದು ಮತ್ತು ಉತ್ತಮ ಚಿಕಿತ್ಸೆಯನ್ನು ಕೊಡುವುದು ನಮ್ಮ ಉದ್ದೇಶವಾಗಿದೆ. ಅವರನ್ನು ಸಮಾಜದಲ್ಲಿ ಒಳ್ಳೆ ಸ್ಥಾನದಲ್ಲಿ ನೋಡುವುದು ಉತ್ತಮ ಹಾಗೂ ಅವರಿಗೆ ನಾವು ಬೆಂಬಲ ನೀಡುವುದು. ಎಂದು ತಿಳಿಸಲಾಯಿತು. ಈ ಒಂದು ಸಭೆಯಲ್ಲಿ ಒಟ್ಟು ಏಳು ಜನ ಭಾಗವಹಿಸಿ ಮಾಹಿತಿಯನ್ನು ಕುರಿತುಕೊಂಡರು.

## “ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆ”



ದಿನಾಂಕ 09 ಮಾರ್ಚ್ 2026ರಂದು ಔರಾದ್ ತಾಲೂಕಿನ ನಾಗಮರ್ಪಲಿ ಗ್ರಾಮದಲ್ಲಿ ಆರೈಕೆದಾರರ ಗುಂಪು ಸಭೆ ನಡೆಯಿತು. ಈ ಸಭೆಯನ್ನು ಆರ್ಬಿಟ್ ಸಂಸ್ಥೆಯ ಯೋಜನೆಯಲ್ಲಿ ನಡೆಸಲಾಯಿತು. ಸಭೆಯಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀಮತಿ ದೀಪಿಕಾ ರವರು ಭಾಗವಹಿಸಿದ್ದರು. ಈ ಸಭೆಯಲ್ಲಿ 06 ಆರೈಕೆದಾರರಿಗೆ ಮಾನಸಿಕ ಅಸ್ವಸ್ಥರ ಆರೈಕೆ ಮಾಡುವ ವಿಧಾನಗಳ ಬಗ್ಗೆ ಮಾಹಿತಿ ನೀಡಲಾಯಿತು. ಮಾನಸಿಕ ಅಸ್ವಸ್ಥರಿಗೆ ಔಷಧಿಯನ್ನು ಸಮಯಕ್ಕೆ ಸರಿಯಾಗಿ ನೀಡುವುದು, ಅವರಿಗೆ ಪ್ರೀತಿ ಮತ್ತು ಸಹಾನುಭೂತಿಯೊಂದಿಗೆ ನಡೆದುಕೊಳ್ಳುವುದು, ಕುಟುಂಬದ ಬೆಂಬಲ ನೀಡುವುದು ಹಾಗೂ ನಿಯಮಿತವಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ಎಂಬ ವಿಷಯಗಳನ್ನು ವಿವರಿಸಲಾಯಿತು. ಅದರ ಜೊತೆಗೆ, ಆರೈಕೆದಾರರು ತಮ್ಮ ಸಮಸ್ಯೆಗಳು ಮತ್ತು ಅನುಭವಗಳನ್ನು ಹಂಚಿಕೊಂಡರು. ಅವರಿಗೆ ಎದುರಾಗುವ ಕಷ್ಟಗಳನ್ನು ಹೇಗೆ ಎದುರಿಸಬೇಕು ಮತ್ತು ಒಬ್ಬರಿಗೊಬ್ಬರು ಸಹಾಯ ಮಾಡುವ ಮಹತ್ವವನ್ನು ತಿಳಿಸಲಾಯಿತು. ಈ ಸಭೆಯ ಮೂಲಕ ಆರೈಕೆದಾರರಲ್ಲಿ ಆತ್ಮವಿಶ್ವಾಸ ಹೆಚ್ಚುವಂತೆ ಮಾಡಿ, ಮಾನಸಿಕ ಅಸ್ವಸ್ಥರ ಉತ್ತಮ ಆರೈಕೆಗೆ ಮಾರ್ಗದರ್ಶನ ನೀಡಲಾಯಿತು. ಸಭೆಯು ಯಶಸ್ವಿಯಾಗಿ ನಡೆಯಿತು ಮತ್ತು ಆರೈಕೆದಾರರು ಇದರ ಪ್ರಯೋಜನವನ್ನು ಪಡೆದುಕೊಂಡರು.

## "ವಿಶೇಷ ಚೇತನರ ಸಬಲೀಕರಣದ ಕುರಿತು ಮಹತ್ವದ ಸಭೆ"



ಕಮಲನಗರ ತಾಲೂಕಿನ ಕರ್ಕ್ಯಾಲ್ ಗ್ರಾಮದಲ್ಲಿ ದಿನಾಂಕ 12 ಮಾರ್ಚ್ 2026ರಂದು ವಿಶೇಷ ಚೇತನರ ಸಬಲೀಕರಣದ ಕುರಿತು ಮಹತ್ವದ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಆರ್ಬಿಟ್ ಸಂಸ್ಥೆ ಹಾಗೂ ಲಿವ್.ಲವ್.ಲಾಫ್ ಫೌಂಡೇಶನ್ ಇವರ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಮುಖ್ಯ ಮಾರ್ಗದರ್ಶಕರಾಗಿ ಆಗಮಿಸಿದ್ದ ಕುಮಾರಿ ಸಂಗೀತಾ ಅವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ. "ವಿಶೇಷ ಚೇತನರು ಸಮಾಜದ ಮುಖ್ಯವಾಹಿನಿಗೆ ಬರಲು ಸರ್ಕಾರ ಮತ್ತು ಸಂಘ-ಸಂಸ್ಥೆಗಳು ಅನೇಕ ಯೋಜನೆಗಳನ್ನು ಜಾರಿಗೆ ತಂದಿವೆ. ಈ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಂಡಾಗ ಮಾತ್ರ ಅವರು ಸ್ವಾವಲಂಬಿ ಹಾಗೂ ಗೌರವಯುತ ಜೀವನ ನಡೆಸಲು ಸಾಧ್ಯ". ಎಂದು ತಿಳಿಸಿದರು. ಸಭೆಯಲ್ಲಿ ವಿಶೇಷ ಚೇತನರ ಏಳಿಗೆಗಾಗಿ ಅನೇಕ ವಿಷಯಗಳ ಬಗ್ಗೆ ವಿಸ್ತೃತವಾಗಿ ಮಾಹಿತಿ ನೀಡಲಾಯಿತು. ಸ್ವಯಂ ಉದ್ಯೋಗ ಆರಂಭಿಸಲು ದೊರೆಯುವ ಕಡಿಮೆ ಬಡ್ಡಿ ದರದ ಸಾಲ ಸೌಲಭ್ಯ ಹಾಗೂ ಉದ್ಯೋಗಾಧಾರಿತ ಕೌಶಲ್ಯ ತರಬೇತಿಗಳು, ಬಸ್ ಮತ್ತು ರೈಲು ಪ್ರಯಾಣದಲ್ಲಿ ದೊರೆಯುವ ರಿಯಾಯಿತಿ ಹಾಗೂ ಉಚಿತ ಪ್ರಯಾಣದ ಹಕ್ಕುಗಳು, ಮಾಸಿಕ ಪಿಂಚಣಿ ಯೋಜನೆಗಳು ಮತ್ತು ವಸತಿ ರಹಿತರಿಗೆ ಮನೆ ನಿರ್ಮಾಣಕ್ಕಾಗಿ ಸಿಗುವ ಸರ್ಕಾರಿ ಅನುದಾನಗಳು. ವಿವಿಧ ಯೋಜನೆಗಳ ಲಾಭ ಪಡೆಯಲು ಅಗತ್ಯವಿರುವ ವಿಶೇಷ ಗುರುತಿನ ಚೀಟಿ ಯುಡಿಐಡಿ ಪಡೆಯುವ ವಿಧಾನದ ಕುರಿತು ಸಂಕ್ಷಿಪ್ತವಾಗಿ ತಿಳಿಸಲಾಯಿತು. ಈ ಸಭೆಯಲ್ಲಿ ಒಟ್ಟು 08 ಜನ ಭಾಗವಹಿಸಿದರು. ಯೋಜನೆಯ ಯಶಸ್ಸಿಗೆ ಕೈಜೋಡಿಸಿದರು. ಸಮಾಜದ ಪ್ರತಿಯೊಬ್ಬರೂ ವಿಶೇಷ ಚೇತನರನ್ನು ಸಮಾನತೆಯಿಂದ ಕಾಣಬೇಕೆಂಬ ಆಶಯದೊಂದಿಗೆ ಸಭೆಯು ಮುಕ್ತಾಯಗೊಂಡಿತು.

## "ಸತ್ಯಮೇವ ಜಯತೆ ಮಾನಸಿಕ ಅಸ್ವತ್ತರ ಆರೈಕೆದಾರರ ಸಂಘದ ಸಭೆ"



ದಿನಾಂಕ 05 ಮಾರ್ಚ್ 2026ರಂದು ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್ ಅವರ ಸಂಯುಕ್ತ ಆಶ್ರಯದಲ್ಲಿ ಬೀದರ್ ತಾಲೂಕಿನ ಕೋಲಾರ್ ಕೆ ಗ್ರಾಮದಲ್ಲಿ ಸತ್ಯಮೇವ ಜಯತೆ ಮಾನಸಿಕ ಅಸ್ವತ್ತರ ಆರೈಕೆದಾರರ ಸಂಘದ ಸಭೆ ಯಶಸ್ವಿಯಾಗಿ ನಡೆಯಿತು. ಈ ಸಭೆಗೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ಪ್ರೀತಿ, ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್‌ನ ಕಾರ್ಯಕರ್ತೆ ಭಾಗವಹಿಸಿ ಸದಸ್ಯರಿಗೆ ಮಾರ್ಗದರ್ಶನ ನೀಡಿದರು. ಸಭೆಯಲ್ಲಿ ಮಾನಸಿಕ ಅಸ್ವಸ್ಥರ ಆರೋಗ್ಯದ ಮಹತ್ವ ಹಾಗೂ ಅವರ ದಿನನಿತ್ಯದ ಆರೈಕೆ ಕುರಿತು ಸಮಗ್ರವಾಗಿ ವಿವರಿಸಲಾಯಿತು. ಅದೇ ವೇಳೆ ಮಾನಸಿಕ ಅಸ್ವಸ್ಥರಿಗೆ ಸರ್ಕಾರ ಮತ್ತು ಆರೋಗ್ಯ ಇಲಾಖೆಯಿಂದ ಲಭ್ಯವಾಗುವ ಉಚಿತ ಮಾತ್ರೆಗಳು ಹಾಗೂ ಚಿಕಿತ್ಸೆ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ಹಂಚಿಕೊಳ್ಳಲಾಯಿತು. ಆರೈಕೆದಾರರು ತಮ್ಮ ಕುಟುಂಬದ ಸದಸ್ಯರಿಗೆ ಸರಿಯಾದ ಸಮಯಕ್ಕೆ ಚಿಕಿತ್ಸೆ ಹಾಗೂ ಆರೈಕೆ ನೀಡುವ ಬಗ್ಗೆ ಜಾಗೃತಿ ಮೂಡಿಸಲಾಯಿತು. ಸಭೆಯು ಮಾನಸಿಕ ಅಸ್ವಸ್ಥರ ಉತ್ತಮ ಆರೋಗ್ಯ, ಯೋಗಕ್ಷೇಮ ಹಾಗೂ ಸಮರ್ಪಕ ಆರೈಕೆಗೆ ಸಹಕಾರ ನೀಡುವ ಉದ್ದೇಶದಿಂದ ಯಶಸ್ವಿಯಾಗಿ ನೆರವೇರಿತು. ಈ ಸಭೆಯಲ್ಲಿ ಒಟ್ಟು 09 ಜನರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

## "ತಾಲೂಕು ಮಟ್ಟದ ವಿಶೇಷ ಚೇತನರ ಸಭೆ"



ದಿನಾಂಕ್ 10 ಮಾರ್ಚ್ 2026ರಂದು ಬಸವಕಲ್ಯಾಣ ತಾಲೂಕಿನಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್.ಲವ್.ಲಾಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ತಾಲೂಕು ಮಟ್ಟದ ವಿಶೇಷ ಚೇತನರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಈ ಸಭೆಗೆ ಆರ್ಬಿಟ್ ಸಂಸ್ಥೆಯ ಕಾರ್ಯಕ್ರಮಗಳ ವ್ಯವಸ್ಥಾಪಕರಾದ ಸಿಸ್ಟರ್ ಕ್ರಿಸ್ಟಿನಾ ರವರು ಆಗಮಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡಿ, ವಿಶೇಷ ಚೇತನರು ಎಂದರೆ ವ್ಯಕ್ತಿಯ ದೈಹಿಕ, ಮಾನಸಿಕ, ಬೌದ್ಧಿಕ ಅಥವಾ ಸಂವೇದನಾ ದೌರ್ಬಲ್ಯಗಳನ್ನು ಹೊಂದಿರುವ ವ್ಯಕ್ತಿಗಳು. ಇವರ ಸಾಮರ್ಥ್ಯಗಳ ಮೇಲೆ ದೀರ್ಘಕಾಲದವರೆಗೆ ಪರಿಣಾಮ ಬೀರುವ ನ್ಯೂನತೆಗಳು. ಇವು ಚಲನಶೀಲತೆ, ಸಂವಹನ, ಕಲಿಕೆ ಅಥವಾ ದೈನಂದಿನ ಕಾರ್ಯಗಳನ್ನು ನಿರ್ವಹಿಸುವಲ್ಲಿ ಅಡೆತಡೆಗಳನ್ನು ಉಂಟುಮಾಡುತ್ತವೆ. ವಿಶೇಷ ಚೇತನರ ಹಕ್ಕುಗಳ (ಖಿಕಫಿಆ) ಕಾಯಿದೆ, 2016 ಕಾಯಿದೆಯನ್ನು ಡಿಸೆಂಬರ್ 2016 ರಲ್ಲಿ ಜಾರಿಗೊಳಿಸಲಾಗಿದೆ. ಇದು ಶೈಕ್ಷಣಿಕ, ಸಾಮಾಜಿಕ, ಕಾನೂನು, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಜೀವನದ ವಿವಿಧ ಅಂಶಗಳಲ್ಲಿ ಅಂಗವಿಕಲರ ಹಕ್ಕುಗಳು ಮತ್ತು ಘನತೆಯನ್ನು ಉತ್ತೇಜಿಸುತ್ತದೆ ಮತ್ತು ರಕ್ಷಿಸುತ್ತದೆ. ಇದರಲ್ಲಿ 21 ತರಹದ ಅಂಗ ವೈಕಲ್ಯ ಪ್ರಕಾರಗಳು ಕಾಣಬಹುದು. ಪ್ರತಿಯೊಬ್ಬರೂ ಗಿಆಖಿಆ ಕಾರ್ಡ್‌ಗೆ ಅರ್ಜಿ ಸಲ್ಲಿಸಬೇಕು, ವೈದ್ಯರ ಬಳಿ ತಪಾಸಣೆ ಪಡೆದುಕೊಂಡು, ಅಂಗವಿಕಲರ ಪೋಷಣ ವೇತನಕ್ಕೆ ಅರ್ಜಿ ಸಲ್ಲಿಸಬೇಕು ಎಂದು ಹೇಳಿದರು. ಹಾಗೂ ಆರೈಕೆದಾರರ ಪೋಷಣ ಭತ್ಯೆಗೂ ಕೂಡ ಅರ್ಜಿ ಸಲ್ಲಿಸಬೇಕು. ನಿಮ್ಮ ಸಹಾಯಕ್ಕಾಗಿ ಪ್ರತಿ ಗ್ರಾಮ ಪಂಚಾಯತ್ ನಲ್ಲಿ ವಿ.ಆರ್.ಡ್ಬ್ಲೂಗಳು ಸದಾ ನಿಮ್ಮ ಸೇವೆಗೆ ಲಭ್ಯವಿರುತ್ತಾರೆ ಎಂದು ಹೇಳಿದರು. ವಿಶೇಷವಾಗಿ ಸಭೆಗೆ ಬಂದ ಫಲಾನುಭವಿಗಳ ಕುಂದು ಕೊರತೆಗಳನ್ನು ಆಲಿಸಿ ಸಮಸ್ಯೆ ಗಳನ್ನು ಪರಿಹರಿಸುವುದಾಗಿ ಭರವಸೆ ನೀಡಿದರು. ಈ ಸಭೆಯಲ್ಲಿ ವಿಶೇಷ ಚೇತನರು ಸೇರಿ ಒಟ್ಟು 24 ಫಲನುಭವಿಗಳು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

## “ಗೀತಾ ಆರೈಕೆದಾರರ ಗುಂಪಿನ ಸಭೆ”



ಕಮಲನಗರ ತಾಲೂಕಿನ ಲಕ್ಷ್ಮೀನಗರ ಗ್ರಾಮದಲ್ಲಿ ಗೀತಾ ಆರೈಕೆದಾರರ ಗುಂಪಿನ ಸಭೆಯನ್ನು ಯಶಸ್ವಿಯಾಗಿ ನಡೆಸಲಾಯಿತು. ಈ ಸಭೆಯಲ್ಲಿ ಒಟ್ಟು 8 ಜನ ಆರೈಕೆದಾರರು ಭಾಗವಹಿಸಿದರು. ಸಭೆಯ ಮುಖ್ಯ ಉದ್ದೇಶ ಆರೈಕೆದಾರರ ಪಾತ್ರ, ಜವಾಬ್ದಾರಿ ಮತ್ತು ಮಾನಸಿಕ ಅಸ್ವಸ್ಥರ ಆರೈಕೆಯಲ್ಲಿ ಅವುಗಳ ಮಹತ್ವವನ್ನು ವಿವರಿಸುವುದು ಆಗಿತ್ತು. ಸಭೆಯ ಆರಂಭದಲ್ಲಿ ಪ್ರಾರ್ಥನೆ ಗೀತೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ನಂತರ ಆರೈಕೆದಾರರ ಗುಂಪಿನ ಮಹತ್ವ, ಅವರು ಎದುರಿಸುವ ಸಮಸ್ಯೆಗಳು ಹಾಗೂ ಅವುಗಳಿಗೆ ಪರಿಹಾರಗಳ ಬಗ್ಗೆ ಚರ್ಚೆ ನಡೆಯಿತು. ಆರೈಕೆದಾರರು ತಮ್ಮ ಅನುಭವಗಳನ್ನು ಹಂಚಿಕೊಂಡರು ಮತ್ತು ಪರಸ್ಪರ ಸಹಕಾರದ ಅಗತ್ಯವನ್ನು ಅರಿತುಕೊಂಡರು. ಈ ಸಂದರ್ಭದಲ್ಲಿ ಮಾನಸಿಕ ಅಸ್ವಸ್ಥರ ಆರೈಕೆಯಲ್ಲಿ ಪಾಲಿಸಬೇಕಾದ ಕ್ರಮಗಳು, ಔಷಧೋಪಚಾರದ ಮಹತ್ವ, ಹಾಗೂ ಕುಟುಂಬದ ಬೆಂಬಲದ ಅಗತ್ಯತೆ ಕುರಿತು ವಿವರಿಸಲಾಯಿತು. ಜೊತೆಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಯಿತು. ಸಭೆಯ ಅಂತ್ಯದಲ್ಲಿ ಎಲ್ಲಾ ಭಾಗವಹಿಸಿದವರು ತಮ್ಮ ಪ್ರಶ್ನೆಗಳು ಮತ್ತು ಸಂಶಯಗಳನ್ನು ಕೇಳಿ ಸ್ಪಷ್ಟನೆ ಪಡೆದುಕೊಂಡರು. ಈ ಸಭೆಯ ಮೂಲಕ ಆರೈಕೆದಾರರಲ್ಲಿ ಆತ್ಮವಿಶ್ವಾಸ ಹೆಚ್ಚಾಗಿ, ತಮ್ಮ ಜವಾಬ್ದಾರಿಯನ್ನು ಇನ್ನಷ್ಟು ಉತ್ತಮವಾಗಿ ನಿರ್ವಹಿಸುವ ಪ್ರೇರಣೆ ದೊರೆಯಿತು.

## “ಬೀದರ್ ಜಿಲ್ಲೆಯ ಮಾನಸಿಕ ಆರೋಗ್ಯ ಅಧಿಕಾರಿಗಳಿಗೆ ಭೇಟಿ”



ದಿನಾಂಕ 23 ಮಾರ್ಚ್ 2026ರಂದು ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ, ಕಾರ್ಯಕ್ರಮದ ಪ್ರತಿನಿಧಿಯಾದ ಶ್ರೀಮತಿ ಮಾಂತಗಿ ಯವರು ಬೀದರ್ ಜಿಲ್ಲೆಯ ಮಾನಸಿಕ ಆರೋಗ್ಯ ಅಧಿಕಾರಿಗಳಾದ ಡಾ. ಕಿರಣ್ ಪಾಟೀಲ್ ಮತ್ತು ಮನೋರೋಗ್ಯ ತಜ್ಞರಾದ ಡಾ. ಅಮಲ್ ಶರೀಫ ರವರನ್ನು ಎಲ್.ಎಲ್.ಎಲ್.ಎಫ್ ಮತ್ತು ಆರ್ಬಿಟ್ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಪತ್ತೆ ಹಚ್ಚಿದ ಮಾನಸಿಕ ಅಸ್ವಸ್ಥ ಫಲಾನುಭವಿಗಳ ಮಾನಸಿಕ ಆರೋಗ್ಯ ಚಿಕಿತ್ಸೆಗೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಮಾತ್ರೆಗಳ ಅಲಭ್ಯತೆ ಕುರಿತು ಚರ್ಚಿಸಿದರು. ಸಮಸ್ಸೆಗಳನ್ನು ಆಲಿಸಿದ ಅವರು ಎಲ್ಲಾ ಸಮಸ್ಸೆಗಳಿಗೆ ಬಗೆಹರಿಸುವುದಾಗಿ ಭರವಸೆ ನೀಡಿದರು. ಈ ಭೇಟಿಯ ಸಂಧರ್ಭದಲ್ಲಿ ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾ. ವಿಕ್ಟರ್ ವಾಸ್ ಕಾರ್ಯಕ್ರಮದ ವ್ಯವಸ್ಥಾಪಕರಾದ ಸಿ. ಕ್ರಿಸ್ಟೀನಾ ಜಿಲ್ಲಾ ಸಂಯೋಜಕರಾದ ಶ್ರೀ ರಫೀಕ್, ತಾಲೂಕು ಮೇಲ್ವಿಚಾರಕರಾದ ಶ್ರೀ ಆನಂದ್ ರವರು ಉಪಸ್ಥಿತರಿದ್ದರು.

## “ಜೀವನಪರ್ಯಕ್ಕಾಗಿ ಕುರಿ ಸಾಕಾಣಿಕೆಗೆ ಸಹಾಯ”



25 ಮಾರ್ಚ್ 2026ರಂದು ಬೀದರ್ ತಾಲೂಕಿನ ಸೇಕ್ರೆಟ್ ಹಾರ್ಟ್ ಚರ್ಚ್‌ನಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್ ಜಂಟಿ ಆಶ್ರಯದಲ್ಲಿ ಮಾನಸಿಕ ರೋಗದಿಂದ ಗುಣಮುಖರಾಗಿದ್ದ 12 ಫಲಾನುಭಗಳಿಗೆ ಜೀವನಪರ್ಯಕ್ಕಾಗಿ ಕುರಿ ಸಾಕಾಣಿಕೆಗೆ ಸಹಾಯ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಲಿವ್.ಲವ್.ಲಾಫ್ ವತಿಯಿಂದ ಕಾರ್ಯಕ್ರಮಗಳ ಸಂಯೋಜಕರಾದ ಮಾತಂಗಿ, ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್, ವಂದನೀಯ ಫಾದರ್ ಕ್ಲಾರಿ ಡಿಸೋಜಾ, ವ್ಯವಸ್ಥಾಪಕರಾದ ಸಿಸ್ಟರ್ ಕ್ರಿಸ್ಟಿನ, ಸಂಯೋಜಕರಾದ ರಫೀಕ್ ಹಾಗೂ ಸಂಸ್ಥೆಯ ಕಾರ್ಯಕರ್ತರು ಮತ್ತು ಫಲಾನುಭವಿಗಳು ಹಾಜರಿದ್ದರು. ಈ ಕಾರ್ಯಕ್ರಮದಲ್ಲಿ ಮಾತನಾಡಿದ ಸಂಸ್ಥೆಯ ನಿರ್ದೇಶಕರು, ಗುಣಮುಖರಾಗಿದ ವ್ಯಕ್ತಿಗಳನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಈ ಸ್ವಯಂ ಉದ್ಯೋಗವು ಅತ್ಯಗತ್ಯವಾಗಿದೆ, ದೈನಂದಿನ ಚಟುವಟಿಕೆಗಳ ಮೂಲಕ ಅವರಲ್ಲಿ ಆತ್ಮವಿಶ್ವಾಸ ಮತ್ತು ಜವಾಬ್ದಾರಿಯನ್ನು ಬೆಳೆಸುತ್ತದೆ. ಹಾಗೂ ಪಡೆದ ಸಹಾಯವನ್ನು ಸದುಪಯೋಗ ಪಡೆದುಕೊಂಡು ಜೀವನ ರೂಪಿಸಿಕೊಳ್ಳುವಂತೆ ಕರೆ ನೀಡಿದರು. ಹಾಗೂ ಅವರಿಗೆ ಕುರಿ ವಿತರಣೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಫಲಾನುಭವಿಗಳು ಮತ್ತು ಆರೈಕೆದಾರರು ಒಟ್ಟು ಸೇರಿ 32 ಜನರು ಭಾಗವಹಿಸಿದ್ದರು.

## “ಬೀದರ ಪಟ್ಟಣದಲ್ಲಿ ಜಿಲ್ಲಾ ವಿಶೇಷ ಚೇತನರ ಸಭೆ”



16 ಮಾರ್ಚ್ 2026ರಂದು ಆರ್ಬಿಟ್ ಸಂಸ್ಥೆಯ ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ, ಬೀದರ ಪಟ್ಟಣದಲ್ಲಿ ಜಿಲ್ಲಾ ವಿಶೇಷ ಚೇತನರ ಸಭೆಯನ್ನು ಆಯೋಜಿಸಲಾಗಿತ್ತು, ಈ ಸಭೆಯನ್ನು ಉದ್ದೇಶಿಸಿ ಪ್ರಾಸ್ತವಿಕವಾಗಿ ಮಾತನಾಡಿದ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ಆಲ್ಬರ್ಟ್ ರವರು, ವಿಶೇಷ ಚೇತನರಿಗಾಗಿ ಇರುವ ಸರ್ಕಾರದ ಎಲ್ಲ ಸೌಲಭ್ಯಗಳನ್ನು ಪಡೆಯಲು ಕೇವಲ ಒಬ್ಬರಿಬ್ಬರಿಂದ ಸಾಧ್ಯವಿಲ್ಲ, ಸಂಘದ ಒಕ್ಕೂಟ ಮೂಲಕವಾಗಿ ಹೋರಾಡಿದರೆ ಅದನ್ನು ತುಂಬಾ ಸುಲಭತೆಯಿಂದ ಪಡೆಯಬಹುದೆಂದು ಉತೇಜನದ ಸಂದೇಶ ನೀಡಿದರು, ಕಾರ್ಯಕ್ರಮದ ವ್ಯವಸ್ಥಾಪಕರಾದ ಸಿಸ್ಟರ್ ಕ್ರಿಸ್ಟಿನಾ ಮಾತನಾಡಿ, ಪ್ರಸ್ತುತವಾಗಿ ಮಾನಸಿಕ ಅಸ್ವಸ್ಥರಿಗೆ ಉಚಿತವಾಗಿ ಮಾತ್ರೆಗಳನ್ನು ದೊರೆಯುತ್ತಿವೆ, ಮುಂದಿನ ದಿನಗಳಲ್ಲಿ ಸರ್ಕಾರದಿಂದ ಈ ಸೌಲಭ್ಯವನ್ನು ನಿಲ್ಲಿಸಬಹುದು, ಸಂಸ್ಥೆಯ ಕಾರ್ಯಕರ್ತರು ನಿಮ್ಮ ಜೊತೆಗೆ ಇರುವುದಿಲ್ಲ ಅಂತಹ ಸಂದರ್ಭದಲ್ಲಿ ನಿಮ್ಮ ಸಂಘದ ಮೂಲಕ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಸಲ್ಲಿಸುವಂತ ನಾಯಕತ್ವ ಗುಣ ಲಕ್ಷಣಗಳು ಬೆಳೆಸಿಕೊಳ್ಳಬೇಕು ಎಂದು ಪ್ರೇರಪಣೆ ಮಾಡಿದರು.

## “ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ”



ದಿನಾಂಕ 03 ಮಾರ್ಚ್ 2026ರಂದು ಔರಾದ್ ತಾಲೂಕಿನ ಮಹಾ ಡೋಣಗಾವ್ ಗ್ರಾಮದಲ್ಲಿ ಆರ್ಬಿಟ್ ಹಾಗೂ ಲಿವ್.ಲವ್.ಲಾಫ್ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಜಾಗೃತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆ ಕಾರ್ಯಕರ್ತರಾದ ಶ್ರೀ ಯೋಹಾನ್ ರವರು ಆಗಿದ್ದರು. ಈ ಜಾಗೃತಿ ಕಾರ್ಯಕ್ರಮದ ಮುಖ್ಯ ಉದ್ದೇಶ ಗ್ರಾಮದಲ್ಲಿನ ಜನರಿಗೆ ಮಾನಸಿಕ ಆರೋಗ್ಯ, ಸಾಮಾಜಿಕ ಸಮಸ್ಯೆಗಳು ಹಾಗೂ ಆರೋಗ್ಯಕರ ಜೀವನಶೈಲಿಯ ಕುರಿತು ಅರಿವು ಮೂಡಿಸುವುದಾಗಿತ್ತು. ಕಾರ್ಯಕ್ರಮದಲ್ಲಿ ಒಟ್ಟು 10 ಜನರು ಭಾಗವಹಿಸಿ, ವಿಷಯದ ಬಗ್ಗೆ ಆಸಕ್ತಿಯಿಂದ ಕೇಳಿ ತಿಳಿದುಕೊಂಡರು. ಕಾರ್ಯಕ್ರಮದಲ್ಲಿ ಮಾನಸಿಕ ಅಸ್ವಸ್ಥತೆಗಳ ಲಕ್ಷಣಗಳು, ಚಿಕಿತ್ಸೆ ಪಡೆಯುವ ವಿಧಾನ, ಕುಟುಂಬದವರ ಸಹಕಾರದ ಮಹತ್ವ, ಮತ್ತು ಸಮಾಜದಲ್ಲಿ ಇರುವ ತಪ್ಪು ಕಲ್ಪನೆಗಳನ್ನು ನಿವಾರಿಸುವ ಬಗ್ಗೆ ವಿವರಿಸಲಾಯಿತು. ಭಾಗವಹಿಸಿದವರು ತಮ್ಮ ಪ್ರಶ್ನೆಗಳನ್ನು ಕೇಳಿ ಸ್ಪಷ್ಟನೆ ಪಡೆದುಕೊಂಡರು. ಈ ಜಾಗೃತಿ ಕಾರ್ಯಕ್ರಮವು ಗ್ರಾಮದಲ್ಲಿ ಉತ್ತಮ ಪ್ರತಿಕ್ರಿಯೆ ಪಡೆದುಕೊಂಡಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಜನರಿಗೆ ಇಂತಹ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸುವ ಅಗತ್ಯವಿದೆ ಎಂದು ಅಭಿಪ್ರಾಯ ವ್ಯಕ್ತವಾಯಿತು.

## “ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ”



ದಿನಾಂಕ 07 ಮಾರ್ಚ್ 2026ರಂದು ಬೀದರ್ ತಾಲೂಕಿನ ಯರನಳ್ಳಿ (ಡಿ) ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆ ಹಾಗೂ ಲಿವ್.ಲವ್.ಲಾಫ್ ಫೌಂಡೇಶನ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಆನಂದ್ ರವರು ಮಾನಸಿಕ ಅಸ್ವಸ್ಥರ ಕುರಿತು ಮಾತನಾಡಿದರು. ಮಾನಸಿಕ ಕಾಯಿಲೆಯು ಒಂದು ಮೆದುಳಿನ ಕಾಯಿಲೆಯಾಗಿದೆ, ಈ ಕಾಯಿಲೆಯನ್ನು ಚಿಕಿತ್ಸೆಯ ಮೂಲಕವಾಗಿ ಗುಣಪಡಿಸಬಹುದು. ಆದರೆ ಜನರು ಈ ಒಂದು ಮಾನಸಿಕ ಕಾಯಿಲೆಯ ಬಗ್ಗೆ ಸರಿಯಾದ ಮಾಹಿತಿಯನ್ನು ಹೊಂದಿಲ್ಲ, ಯಾರಾದರೂ ಮಾನಸಿಕವಾಗಿ ವರ್ತಿಸಿದರೆ ಇದು ಭಾನಮತಿ ಇಲ್ಲವೇ ದೆವ್ವ ಕಾಟ ಎಂಬ ಭ್ರಮೆಯಲ್ಲಿ ಜನರು ಇದ್ದಾರೆ. ಆದರೆ ಈ ಒಂದು ಮಾನಸಿಕ ಕಾಯಿಲೆಯನ್ನು ಚಿಕಿತ್ಸೆಯ ಮೂಲಕವಾಗಿ ಗುಣಪಡಿಸಬಹುದು ಹೇಗಂದರೆ ಮಾನಸಿಕ ತಜ್ಞರ ಬಳಿಗೆ ಅವರನ್ನು ಕರಕೊಂಡು ಹೋಗಿ ಸರಿಯಾದ ರೀತಿಯಲ್ಲಿ ಅವರಿಗೆ ಚಿಕಿತ್ಸೆಯನ್ನು ನೀಡಿದರೆ ಅವರು ಸಂಪೂರ್ಣವಾಗಿ ಗುಣಮುಖರಾಗುತ್ತಾರೆ. ಪ್ರತಿ ತಿಂಗಳ ಮೊದಲನೇ ಸೋಮವಾರ ದಂದು ಜನವಾಡ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಾನಸಿಕ ತಜ್ಞರು ಬರುತ್ತಾರೆ. ಮಾನಸಿಕವಾಗಿ ಬಳಲುತ್ತಿರುವವರಿಗೆ ಉಚಿತ ತಪಾಸಣೆ ಮತ್ತು ಉಚಿತ ಚಿಕಿತ್ಸೆ ನೀಡಲಾಗುವುದು ಎಂದು ಸಮುದಾಯದ ಜನರಿಗೆ ಜಾಗೃತಿಯನ್ನು ಮೂಡಿಸಲಾಯಿತು. ಈ ಒಂದು ಕಾರ್ಯಕ್ರಮದಲ್ಲಿ ಒಟ್ಟು 10 ಜನರು ಭಾಗವಹಿಸಿದರು.

## “ಮಾನಸಿಕ ಅಸ್ವಸ್ಥತೆ ಕುರಿತು ಜಾಗೃತಿ ಕಾರ್ಯಕ್ರಮ”



ದಿನಾಂಕ 05 ಮಾರ್ಚ್ 2026ರಂದು ಹುಲಸೂರು ತಾಲೂಕಿನ ಬೇಲೂರ ಗ್ರಾಮದಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಜಾಗೃತಿ ಕಾರ್ಯಕ್ರಮವನ್ನು ಆರ್ಬಿಟ್ ಸಂಸ್ಥೆಯ ನವಜೀವನ ಲೀವ್.ಲವ್.ಲಾಫ್ ಕಾರ್ಯಕ್ರಮದ ವತಿಯಿಂದ ಆಯೋಜಿಸಲಾಗಿದ್ದು. ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಲಕ್ಷ್ಮೀ ರವರು ಜನರಿಗೆ ಅರಿವು ಮೂಡಿಸಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ ಮಾನಸಿಕ ಅಸ್ವಸ್ಥ ವ್ಯಕ್ತಿಗಳ ಲಕ್ಷಣಗಳು ಮತ್ತು ಜನರಲ್ಲಿ ಇರುವ ತಪ್ಪು ನಂಬಿಕೆಗಳ ಬಗ್ಗೆ ಅರಿವು ಮೂಡಿಸಲಾಯಿತು. ಮಾನಸಿಕ ಕಾಯಿಲೆ ಎಂದರೇನು? ಅದು ಹೇಗೆ ಬರುತ್ತದೆ ? ಅದರ ಲಕ್ಷಣಗಳೇನು? ಅದಕ್ಕೆ ಚಿಕಿತ್ಸೆ ಇದೆ ಎಂಬುದರ ಬಗ್ಗೆ ಮಾಹಿತಿಯನ್ನು ಕೊಡಲಾಯಿತು. ಮಾನಸಿಕ ಕಾಯಿಲೆ ಒಂದು ಮೆದುಳಿನ ಕಾಯಿಲೆಯಾಗಿದೆ .ಇದು ಯಾವಾಗ ಬೇಕಾದರೂ ಬರಬಹುದು. ಇದು ಹೇಗೆ ಬರುತ್ತದೆ ಎಂದರೆ ಇದು ಏನಾದ್ರೂ ಭಯಾನಕ ವಿಷಯಗಳನ್ನು ನೋಡಿದಾಗ ಬರಬಹುದು ಮತ್ತು ಅತಿಯಾದ ಚಿಂತನೆಯಿಂದ ಬರಬಹುದು. ಹೀಗೆ ಅವರಿಗೆ ಈ ಕಾಯಿಲೆ ಬಗ್ಗೆ ಅರಿವು ಮೂಡಿಸಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 10 ಜನರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

## “ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆ”



10 ಮಾರ್ಚ್ 2026ರಂದು ಭಾಲ್ಕಿ ತಾಲೂಕಿನಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲೀವ್.ಲವ್.ಲಾಫ್ ಫೌಂಡೇಶನ್ ಅವರ ಸಹಯೋಗದಲ್ಲಿ ಆಪ್ತಸಮಾಲೋಚಕಿ ಶ್ರೀಮತಿ ರೂಪಾಲಿ ಅವರು ವೈಯಕ್ತಿಕ ಸಮಾಲೋಚನೆ ನೀಡುವ ಮೂಲಕ ಹಾಗೂ ಮಾತ್ರೆಗಳ ಪರಿಶೀಲನೆ ಮಾಡುವ ಮೂಲಕ ಬೆಂಬಲ ಮತ್ತು ಪ್ರೋತ್ಸಾಹ ನೀಡಿದರು. ಈ ಸಂದರ್ಭದಲ್ಲಿ ಮಾನಸಿಕ ಕಾಯಿಲೆ ಎನ್ನುವುದು ಮೆದುಳಿಗೆ ಸಂಬಂಧಿಸಿದ ಕಾಯಿಲೆಯಾಗಿದ್ದು, ಇದು ವ್ಯಕ್ತಿಯ ಆಲೋಚನೆ, ಭಾವನೆ ಮತ್ತು ಸಮಾಜದಲ್ಲಿ ಹೊಂದಾಣಿಕೆ ಸಾಧಿಸುವ ಸಾಮರ್ಥ್ಯವನ್ನು ಪ್ರಭಾವಿತಗೊಳಿಸುತ್ತದೆ, ಇದರಿಂದ ಖಿನ್ನತೆ ಉಂಟಾಗುವ ಸಾಧ್ಯತೆ ಇರುತ್ತದೆ ಎಂದು ತಿಳಿಸಲಾಯಿತು. ಇದೇ ವೇಳೆ ಇಂತಹ ಫಲಾನುಭವಿಗಳನ್ನು ನೋಡಿಕೊಳ್ಳುವ ಆರೈಕೆದಾರರು ಸಹ ಮಾನಸಿಕ ಒತ್ತಡವನ್ನು ಅನುಭವಿಸಬಹುದು ಎಂದು ತಿಳಿಸಿ, ಫಲಾನುಭವಿಯ ಆರೋಗ್ಯದ ಜೊತೆಗೆ ತಮ್ಮ ಸ್ವಂತ ಆರೋಗ್ಯದತ್ತವೂ ಗಮನ ಹರಿಸುವಂತೆ ಸಲಹೆ ನೀಡಲಾಯಿತು.

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## "ಶರಣಬಸವೇಶ್ವರ ದೇವಸ್ಥಾನದಲ್ಲಿ ಟೆಂಟ್ ಹೌಸ್ ಕಾರ್ಯಕ್ರಮ"



17 ಮಾರ್ಚ್ 2026ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜೀ ಫೌಂಡೇಶನ್ ಸಂಯೋಗದಲ್ಲಿ ಕಲ್ಬುರ್ಗಿ ತಾಲೂಕಿನ ಶರಣಬಸವೇಶ್ವರ ದೇವಸ್ಥಾನದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಟೆಂಟ್ ಹೌಸ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. 0–8 ವರ್ಷದೊಳಗಿನ, ಬೆಳವಣಿಗೆಯಲ್ಲಿ ಕುಂಟಿತ ಹೊಂದಿದ ಮಕ್ಕಳು, ಅಂದರೆ ಮಗು 5 ತಿಂಗಳಿಗೆ ಕತ್ತು ನಿಲ್ಲಬೇಕು, ಆರು ತಿಂಗಳಿಗೆ ಮಗು ಕುಳಿತುಕೊಳ್ಳಬೇಕು, ಒಂದು ವರ್ಷದಲ್ಲಿ ಮಗು ನಡೆಯಬೇಕು ಮೂರು ವರ್ಷದಲ್ಲಿ ಮಕ್ಕಳು ಚೆನ್ನಾಗಿ ಮಾತನಾಡಬೇಕು, ಇವೆಲ್ಲವುಗಳು ಲಕ್ಷಣ ಮಗುವಿನಲಿ ಕಂಡು ಬಾರದೇ ಇದ್ದರೆ ಆ ಮಗುವಿಗೆ ನಮ್ಮ ಸೇವಾ ಸಂಗಮ ಸಂಸ್ಥೆಯ ವತಿಯಿಂದ ಮಗುವಿಗೆ ಚಟುವಟಿಕೆ ನೀಡುತ್ತೇವೆ. ನಮ್ಮ ಯೋಜನೆಯ ಕುರಿತು ಕರಪತ್ರ ನೀಡುವ ಮೂಲಕ ಅವರಿಗೆ ಮಾಹಿತಿ ನೀಡಲಾಯಿತು.

## "ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳಿಗೆ ಸರ್ಕಾರಿ ಸೌಲಭ್ಯಗಳ ಮಾಹಿತಿ"



ಕಲಬುರ್ಗಿ ನಗರ ಪ್ರದೇಶದಲ್ಲಿ ಬರುವಂತಹ ಚೇತನ ಕೇಂದ್ರದಲ್ಲಿ 24 ಮಾರ್ಚ್ 2026 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್, ಕಲಬುರ್ಗಿ ಇವರ ಸಂಯುಕ್ತ ಆಶ್ರಯದಲ್ಲಿ District level parents champion group meeting ಹಮ್ಮಿಕೊಳ್ಳಲಾಯಿತು. ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ವ್ಯವಸ್ಥಾಪಕರಾದ ಶ್ರೀಮತಿ ಶ್ವೇತಾ ಕುಲ್ಕರ್ಣಿ ಅವರು ಈ ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳಿಗೆ ಇರುವ ಸರ್ಕಾರಿ ಸೌಲಭ್ಯಗಳನ್ನು ಯಾವರೀತಿ ಪಡೆದುಕೋಳಬೇಕು ಎಂಬುದರ ಕುರಿತು ಮಾಹಿತಿಯನ್ನು ನೀಡಿದರು. ಒಗ್ಗಟ್ಟಿನಲ್ಲಿ ಬಲವಿದೆ ನಾವೆಲ್ಲರು ಕೂಡಿಕೊಂಡು ಮಕ್ಕಳಿಗೆ ಗ್ರಾಮ ಪಂಚಾಯಿತಿ 5% ಅನುದಾನ ಹಾಗೂ ವಿಕಲ ಚೇತನ ಪಿಂಚಣಿ ಮಾಡಿಸುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳು ಇವೆಲ್ಲ ಸಮಸ್ಯೆಗಳು ನಾವೇಲ ಪಾಲಕರು ಒಂದುಗೂಡಿ ಆ ಯೊಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ಶಿವಕಾಂತ, ಶ್ರೀಮತಿ ಮಂಜುಳಾ, ಕು.ಅನಿತಾ ಶ್ರೀಮತಿ ಶಂಕ್ರಮ್ಮ ಅವರು ಹಾಗೂ 15 ಜನ ಪಾಲಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## "ಬೆಳವಣಿಗೆಯಲ್ಲಿ ಕೊಂಟಿತ ಹೊಂದಿದ ಮಕ್ಕಳ ಜಾಗೃತಿ ಕಾರ್ಯಕ್ರಮ"



05 ಮಾರ್ಚ್ 2026ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜಿ ಫೌಂಡೇಶನ್ನ ಸಂಯೋಗದಲ್ಲಿ ಕಲ್ಬುರ್ಗಿ ತಾಲೂಕಿನ ಮಳೆ ಗ್ರಾಮದ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಬೆಳವಣಿಗೆಯಲ್ಲಿ ಕೊಂಟಿತ ಹೊಂದಿದ ಮಕ್ಕಳ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. 0–8 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಟಿತ ಹೊಂದಿದ ಮಕ್ಕಳ ಅಂದರೆ ಮೂರು ತಿಂಗಳಿಗೆ ಮಗುವಿನ ಕತ್ತು ನಿಲ್ಲಬೇಕು ಒಂದುವೇಳೆ ನಿಲ್ಲದಿದ್ದರೆ, ಒಂದು ವರ್ಷದಲ್ಲಿ ಮಗು ನಡೆಯಬೇಕು ಒಂದುವೇಳೆ ನಡೆಯದಿದ್ದರೆ ಅಂತಹ ಮಕ್ಕಳಿಗೆ ಚಟುವಟಿಕೆ ಮಾಡುವುದರ ಮೂಲಕ ದಲಾವಣೆ ತರುವುದೆಂದು ಲಕ್ಷ್ಮಿಅವರು 15 ಜನ ವಿದ್ಯಾರ್ಥಿನಿಯರಿಗೆ ಶಿಕ್ಷಕಿಯರಿಗೆ ತಿಳಿಸಿದರು.

## "ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮ"



ಮಾರ್ಚ್ 2026ರಂದು ಸೇವಾ ಸಂಗಮ ಸಂಸ್ಥೆ ಅಜೀಂ ಪ್ರೇಮಜಿ ಅವರ ಸಂಯೋಗದಲ್ಲಿ ಶಿಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆ ಅಡಿಯಲ್ಲಿ ಕಲ್ಬುರ್ಗಿ ನಗರದ ಗಾಜಿಪುರ ಕಾಲೋನಿಯ ಮಹಾನಂದ ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಬೆಳವಣಿಗೆಯಲ್ಲಿ ಕುಂಠಿತ ಇರುವ ಮಕ್ಕಳನ್ನು ಕುರಿತು ಮಾಹಿತಿ ನೀಡಲಾಯಿತು. 0–8 ವರ್ಷದ ಒಳಗಿನ ಮಕ್ಕಳಲ್ಲಿ ಬೆಳವಣಿಗೆಯ ಹಂತ ಯಾವರೀತಿ ಕಂಡುಬರುತ್ತದೆ ಎಂದರೆ. 5 ತಿಂಗಳ ಮಗುವಿನ ಕತ್ತು ನಿಲ್ಲಬೇಕು 9 ತಿಂಗಳ ಮಗು ಚೆನ್ನಾಗಿ ಕುಳಿತುಕೊಳ್ಳಬೇಕು. ಒಂದು ವರ್ಷಕ್ಕೆ ಮಗು ಮಾತನಾಡಬೇಕು. ಮೂರು ವರ್ಷಕ್ಕೆ ಮಗು ಎಲ್ಲರ ಜೊತೆ ಸಾಮಾಜಿಕವಾಗಿ ಬೆರೆಯಬೇಕು. ಮೇಲಿನ ಎಲ್ಲಾ ಲಕ್ಷಣಗಳು ಕಂಡುಬಾರದೇ ಇರುವ ಮಗುವು ಬೆಳವಣಿಗೆಯಲ್ಲಿ ಕುಂಠಿತಗೋಳುತ್ತದೆ ಎಂದು ಗುರುತಿಸಲಾಗುತ್ತದೆ. ಇಂಥಾ ಮಕ್ಕಳು ನಿಮ್ಮ ಸುತ್ತಮೂತ್ತ ಕಂಡುಬಂದರೆ. ನಮ್ಮ ಸಂಸ್ಥೆಗೆ ಮಾಹಿತಿ ತಿಳಿಸಿರಿ. ಉತ್ತೇಜ ಕಚಟುವಟಿಕೆಗಳ ಮೂಲಕ ಅವರ ಬೆಳವಣಿಗೆ ಕುಂಠಿತವನು ಕಡಿಮೆಗೊಳಿಸಬಹುದು ಎಂದು ಶ್ರೀಮತಿ ಮಂಜುಳಾ ಅವರು ಸಂಪೂರ್ಣ ಮಾಹಿತಿಯನ್ನು 20 ಜನ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು. ಶಾಲೆಯ ಮುಖ್ಯಪಾಧ್ಯಾಯರು ಇದ್ದರು.

## “ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮ”



23 ಮಾರ್ಚ್ 2026ರಂದು ಸೇವಾ ಸಂಗಮ ಸಂಸ್ಥೆ ಅಜೀಂ ಪ್ರೇಮಜಿ ಅವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆ ಅಡಿಯಲ್ಲಿ ಕಲಬುರಗಿ ನಗರದ ಪ್ರದೇಶದ ರಾಜಾಪುರ ಕಾಲೋನಿಯ ಬ್ಲೂ ಎಂ ಗೋಲ್ಡ ಪೂರ್ವ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಕುರಿತು ಮಾಹಿತಿ ನೀಡಲಾಯಿತು. 0–8 ವರ್ಷದ ಒಳಗಿನ ಮಕ್ಕಳಲ್ಲಿ ಬೆಳವಣಿಗೆಯ ಹಂತಗಳು ಯಾವರೀತಿ ಕಂಡುಬರುತ್ತವೆ ಎಂದರೆ 5 ತಿಂಗಳಿಗೆ ಮಗುವಿನ ಕತ್ತು ನಿಲ್ಲಬೇಕು 9 ತಿಂಗಳಿಗೆ ಮಗು ಚೆನ್ನಾಗಿ ಕುಳಿತುಕೊಳ್ಳಬೇಕು 1 ವರ್ಷಕ್ಕೆ ಮಗು ಮಾತನಾಡಬೇಕು 3 ವರ್ಷಕ್ಕೆ ಮಗು ಯಲ್ಲರ ಜೊತೆಗೆ ಸಾಮಾಜಿಕವಾಗಿ ಬೆರೆಯಬೇಕು ಮೇಲಿನ ಎಲ್ಲಾ ಲಕ್ಷಣಗಳು ಕಂಡುಬಾರದೆ ಇದ್ದ ಮಗುವು ಬೆಳವಣಿಗೆಯಲ್ಲಿ ಕುಂಠಿತಗೊಳ್ಳುತ್ತದೆ ಎಂದು ಗುರು ತಿಸಲಾಗುತ್ತದೆ. ಇಂಥ ಮಕ್ಕಳು ನಿಮ್ಮ ಸುತ್ತುಮುತ್ತಿನಲ್ಲ ಕಂಡುಬಂದರೆ ನಮ್ಮ ಸಂಸ್ಥೆಗೆ ಮಾಹಿತಿ ನೀಡಿ ಅವರಿಗೆ ಉತ್ತೇಜಕ ಚಟುವಟಿಕೆಗಳ ಮೂಲಕ ಅವರಿಗೆ ಬೆಳವಣಿಗೆಯಲ್ಲಿ ಕುಂಠಿತವನ್ನು ಕಡಿಮೆಗೊಳಿಸಬಹುದು ಎಂದು ಸಂಪೂರ್ಣ ಮಾಹಿತಿಯನ್ನು ಶ್ರೀಮತಿ ಮಂಜುಳಾ ರವರು 30 ಜನ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು.

## “ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮ”



23 ಮಾರ್ಚ್ 2026ರಂದು ಕಲಬುರಗಿ ಜಿಲ್ಲೆಯಲ್ಲಿ ಬರುವ ಸಣ್ಣೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿ ಗೆಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಕುರಿತು ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ದಾಕ್ಷಾಯಿಣಿ ಇವರು ಮಾಹಿತಿಯನ್ನು ನೀಡಿದರು. 0 ಯಿಂದ 6 ವರ್ಷದ ಒಳಗಿನ ಮಕ್ಕಳಲ್ಲಿ ಬೆಳವಣಿಗೆಯ ಹಂತಗಳು ಯಾವರೀತಿಯಾಗಿ ಕಂಡುಬರುತ್ತದೆ ಎಂದರೆ 5 ತಿಂಗಳಿಗೆ ಮಗುವಿನ ಕತ್ತು ನಿಲ್ಲಬೇಕು ಒಂಬತ್ತು ತಿಂಗಳಿಗೆ ಮಗುವು ಚೆನ್ನಾಗಿ ಕುಳಿತುಕೋಳಬೇಕು ಒಂದು ವರ್ಷಕ್ಕೆ ಮಗುವು ಮಾತನಾಡಬೆಕು ಮೂರು ವರ್ಷಕ್ಕೆ ಮಗುವು ಎಲ್ಲಾರ ಜೋತೆಗೆ ಸಾಮಾಜಿಕವಾಗಿ ಬೇರೆಯಬೇಕು ಆರು ವರ್ಷಕ್ಕೆ ಮಗುವಿನ ಬೌದ್ಧಿಕ ಸಾಮರ್ಥ್ಯ ಹೊಂದಿರಬೇಕು ಒಂದು ವೇಳೆ ಈ ಮೇಲಿನ ಅಂಶಗಳು ಮಗುವಿನಲ್ಲಿ ಕಂಡುಬಾರದೆ ಹೋದರೆ ಮಗುವೂ ಬೆಳವಣಿಗೆಯಲ್ಲಿ ಕುಂಠಿತಗೋಳ್ಳುತ್ತದೆ ಎಂಬುದು ತಿಳಿದುಕೋಳಬೇಕು. ಬೆಳವಣಿಗೆಯಲ್ಲಿ ಮಕ್ಕಳಿಗೆ ಶೀಘ್ರವಾಗಿ ಪತ್ತೆಮಾಡುವ ಮೂಲಕ ಮಕ್ಕಳ ನ್ಯೂನತೆಗೆ ತಕ್ಕಂತೆ ಉತ್ತೇಜಕ ಚಟುವಟಿಕೆಗಳನ್ನು ನೀಡುವ ಕಾರ್ಯ ಸೇವಾಸಂಗಮ ಸಂಸ್ಥೆಯ ಮಾಡುತ್ತಿದೆ. ಸರಿಯಾದ ಸಮಯಕ್ಕೆ ಉತ್ತೇಜಕ ಚಟುವಟಿಕೆ ದೊರೆಯದ ಸಂಧರ್ಭದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳು ವಿಕಲಚೇತನರಾಗುವ ಸಂಭವವಿರುತ್ತದೆ ಎಂದು ಹೇಳಿದರು. ಈ ಒಂದು ಕಾರ್ಯಕ್ರಮದಲ್ಲಿ 24 ವಿದ್ಯಾರ್ಥಿಗಳು ಭಾಗವಹಿಸಿದ್ದರು.

## “ಬಸವೇಶ್ವರ ಪೂರ್ವ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮ”



23 ಮಾರ್ಚ್ 2026ರಂದು ಸೇವಾ ಸಂಗಮ ಸಂಸ್ಥೆ ಅಜೀಂ ಪ್ರೇಮಜಿ ಅವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆ ಅಡಿಯಲ್ಲಿ ಕಲಬುರಗಿ ನಗರದ ಪ್ರದೇಶದ ನಂದಿ ಕಾಲೋನಿಯ ಬಸವೇಶ್ವರ ಪೂರ್ವ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಕುರಿತು ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆಯ ಬಗ್ಗೆ ಮಾಹಿತಿ ನೀಡಲಾಯಿತು. 0–8 ವರ್ಷದ ಒಳಗಿನ ಮಕ್ಕಳಲ್ಲಿ ಬೆಳವಣಿಗೆಯ ಹಂತಗಳು ಯಾವರೀತಿ ಕಂಡುಬರುತ್ತವೆ ಎಂದರೆ 5 ತಿಂಗಳಿಗೆ ಮಗುವಿನ ಕತ್ತು ನಿಲ್ಲಬೇಕು 9 ತಿಂಗಳಿಗೆ ಮಗು ಚೆನ್ನಾಗಿ ಕುಳಿತುಕೊಳ್ಳಬೇಕು 1 ವರ್ಷಕ್ಕೆ ಮಗು ಮಾತನಾಡಬೇಕು 3 ವರ್ಷಕ್ಕೆ ಮಗು ಯಲ್ಲರ ಜೊತೆಗೆ ಸಾಮಾಜಿಕವಾಗಿ ಬೆರೆಯಬೇಕು ಮೇಲಿನ ಎಲ್ಲಾ ಲಕ್ಷಣಗಳು ಕಂಡುಬಾರದೆ ಇದ್ದ ಮಗುವು ಬೆಳವಣಿಗೆಯಲ್ಲಿ ಕುಂಠಿತಗೊಳ್ಳುತ್ತದೆ ಎಂದು ಗುರುತಿಸಲಾಗುತ್ತದೆ. ಇಂಥ ಮಕ್ಕಳು ನಿಮ್ಮ ಸುತ್ತಮುತ್ತಿನಲ್ಲಿ ಕಂಡುಬಂದರೆ ನಮ್ಮ ಸಂಸ್ಥೆಗೆ ಮಾಹಿತಿ ನೀಡಿ ಅವರಿಗೆ ಉತ್ತೇಜ ಕಚಟುವಟಿಕೆಗಳ ಮೂಲಕ ಅವರಿ ಗೆಬೆಳವಣಿಗೆಯಲ್ಲಿ ಕುಂಠಿತವನ್ನು ಕಡಿಮೆಗೊಳಿಸಬಹುದು ಎಂದು ಸಂಪೂರ್ಣ ಮಾಹಿತಿಯನ್ನು ಶ್ರೀಮತಿ ಶಂಕ್ರಮ್ಮ ಅವರು 30 ಜನ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು.

## “ನಮ್ಮ ಅನಾರೋಗ್ಯಕ್ಕೆ ಮೂಲ ಕಾರಣ ನಾವೇ! ಕ್ಯಾನ್ಸರ ರೋಗಿಯ ಮನೆ ಭೇಟಿ”



ದಿನಾಂಕ 23 ಮಾರ್ಚ್ 2026ರಂದು ಸೇವಾ ಸಂಗಮ ಸಂಸ್ಥೆ ವತಿಯಿಂದ ಕಲಬುರ್ಗಿ ತಾಲೂಕಿನಲ್ಲಿ ಬರುವ ಪರ್ತಬಾದ ಗ್ರಾಮಕ್ಕೆ ಸ್ಪರ್ಶ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕೀಯಾದ ಶ್ರೀಮತಿ ನಂದಿನಿ ಮತ್ತು ಶ್ರೀಮತಿ ಇಂದುರವರು ಕ್ಯಾನ್ಸರ್ ರೋಗಿಯ ಮನೆ ಭೇಟಿ ಮಾಡಿದರು. ಅವರನ್ನು ಆಪ್ತಸಮಾಲೋಚನೆಯನ್ನು ಮಾಡುವ ಮೂಲಕ ಅವರಿಗೆ ಪ್ರತಿ ದಿನನಿತ್ಯ ಹಸಿರು ತರಕಾರಿ ಮತ್ತು ಹಣ್ಣುಗಳನ್ನು ಸೇವಿಸಲು ತಿಳಿಸಿ ಅವರಿಗೆ ಅವರ ಆ ರೋಗ್ಯದ ಬಗ್ಗೆ ಆಳವಾಗಿ ಆತ್ಮ ಧೈರ್ಯವನ್ನು ತುಂಬಲಾಯಿತು.

## “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಅವರ್ನೆಸ್ ಕಾರ್ಯಕ್ರಮ”



18 ಮಾರ್ಚ್ 2026ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜಿ ಫೌಂಡೇಶನ ಸಂಯೋಗದಲ್ಲಿ ಕಲ್ಬುರ್ಗಿ ತಾಲೂಕಿನ ಖಾನಾಪುರ ಏರಿಯಾ 1ನೇ ಅಂಗನವಾಡಿ ಕೇಂದ್ರದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಅವರ್ನೆಸ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. 0–8 ವರ್ಷದೊಳಗಿನ, ಬೆಳವಣಿಗೆಯಲ್ಲಿ ಕುಂಟಿತ ಹೊಂದಿದ ಮಕ್ಕಳು, ಅಂದರೆ ಮಗು 5 ತಿಂಗಳಿಗೆ ಕತ್ತು ನಿಲ್ಲಬೇಕು, ಆರು ತಿಂಗಳಿಗೆ ಮಗು ಕುಳಿತುಕೊಳ್ಳಬೇಕು, ಒಂದು ವರ್ಷದಲ್ಲಿ ಮಗು ನಡೆಯಬೇಕು ಮೂರು ವರ್ಷದಲ್ಲಿ ಮಕ್ಕಳು ಚೆನ್ನಾಗಿ ಮಾತನಾಡಬೇಕು ಇವೆಲ್ಲವುಗಳು ಲಕ್ಷಣ ಮಗುವಿನಲ್ಲಿ ಕಂಡುಬಾರದೇ ಇದ್ದರೆ ಆ ಮಗುವಿಗೆ ನಮ್ಮ ಸೇವಾ ಸಂಗಮ ಸಂಸ್ಥೆಯ ವತಿಯಿಂದ ಮಗುವಿಗೆ ಚಟುವಟಿಕೆ ನೀಡುತ್ತೇವೆ ನಮ್ಮ ಯೋಜನೆಯ ಕುರಿತು ಮಾಹಿತಿ ನೀಡಲಾಯಿತು. ಹಾಗೂ ಇದರಜೊತೆಗೆ ಸರ್ಕಾರದ ಸಾಲಭ್ಯ ಕುರಿತು ಮಾಹಿತಿ ನೀಡಲಾಯಿತು. ಇದರ ಸದುಪಯೋಗವನ್ನು 10 ಜನ ಪಡೆದುಕೊಂಡರು.

## “ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳ ಪಾಲಕರ ಉತ್ತೇಜಕ ಚಟುವಟಿಕೆಗಳ ಮಾಹಿತಿ”



24 ಮಾರ್ಚ್ 2026ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್ನ ಇವರ ಸಂಯುಕ್ತ ಆಶ್ರಯದಲ್ಲಿ, ಕಲಬುರ್ಗಿ ನಗರ ಪ್ರದೇಶದಲ್ಲಿರುವ ಚೇತನ ಅರ್ಲಿ ಇಂಟರ್‌ವ್ಯೂಷನ್ ಕೇಂದ್ರದಲ್ಲಿ. ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳಿಗೆ ಪಾಲಕರು ಮನೆಯಲ್ಲಿರುವ ವಸ್ತುಗಳನ್ನು ಉಪಯೋಗಿಸಿಕೊಂಡು. ಯಾವರೀತಿಯಾಗಿ ಉತ್ತೇಜನ ಚಟುವಟಿಕೆ ಮಾಡಬೇಕು. ಮಕ್ಕಳಲ್ಲಿ ಯಾವ ನ್ಯೂನ್ಯತೆಗೆ ಯಾವ ಚಟುವಟಿಕೆ ಮಾಡಬೇಕು ಎಂಬುದನ್ನು ಹಂತಹಂತವಾಗಿ ಪ್ರಾಯೋಗಿಕವಾಗಿ ಮಕ್ಕಳ ಪಾಲಕರಿಗೆ ಮಾಹಿತಿ ತಿಳಿಸಲಾಯಿತು. ಮಾತಿನ ದೋಷವಿರುವ ಮಕ್ಕಳಿಗೆ ಮನೆಯಲ್ಲಿ ಪಾಲಕರು. ಯಾವರೀತಿಯಾಗಿ ಶಬ್ದಗಳನ್ನು ಉಚ್ಚಾರಣೆ ಮಾಡಿಸಬೇಕು. ಸಾಮಾನ್ಯ ಮಕ್ಕಳಂತೆ ಈ ಮಕ್ಕಳನ್ನು ಸಹ ವಿಶೇಷವಾದ ಕಾಳಜಿ ವಹಿಸಬೇಕು. ಮತ್ತು ಅವರಿಗೆ ಉತ್ತಮವಾದ ಪರಿಸರ ನಿರ್ಮಾಣ ಮಾಡಬೇಕು. ದಿನನಿತ್ಯ ಮಕ್ಕಳಿಗೆ ಚೇತನ ಇಂಟರ್‌ವ್ಯೂಷನ್ ಕೇಂದ್ತದಲ್ಲಿ ಕರೆದುಕೊಂಡು ಬರಬೇಕೆಂದು. ಶ್ರೀಮತಿ ಶಿವಕಾಂತ ರವರು ತರಬೇತಿ ನೀಡಿದರು. ವಿಶೇಷ ಚೇತನರಿಗಿರುವ ಸರಕಾರದಿಂದ ಸಿಗುವ ವಿವಿಧ ಯೋಜನೆಗಳ ಬಗ್ಗೆ. ಮತ್ತು ಅವುಗಳನ್ನು ಪಡೆಯಬೇಕಾದರೆ ಪಾಲಕರಲ್ಲಿ ಯಾವೆಲ್ಲ ದಾಖಲತ್ತಿಗಳಿರಬೇಕು. ಎಂಬುದರ ಬಗ್ಗೆ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ವ್ಯವಸ್ಥಾಪಕರಾದ ಶ್ರೀಮತಿ ಶ್ವೇತ ಮಾಹಿತಿ ತಿಳಿಸಿದರು. ಈ ಒಂದು ತರಬೇತಿ ಕಾರ್ಯಕ್ರಮದಲ್ಲಿ ಕುಮಾರಿ ಅನಿತಾ, ಶ್ರೀಮತಿ ಪುಷ್ಪ, ಶ್ರೀಮತಿ ಮಂಜುಳಾ ಒಟ್ಟು 45 ವಿಶೇಷಚೇತನ ಮಕ್ಕಳ ಪಾಲಕರು ಉಪಸ್ಥಿತರಿದ್ದರು.

## “ಸಮೃದ್ದಿ ಕಾರ್ಯಕ್ರಮ”



17 ಮಾರ್ಚ್ 2026ರಂದು ಕಲ್ಬುರ್ಗಿ ಜಿಲ್ಲೆಯ ಬರುವ ಪರ್ತಬಾದ್ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯ ಮಹಿಳಾ ಸಬಲೀಕರಣ ಕಾರ್ಯಕ್ರಮದ ಸಂಯೋಜಕೀಯದ ಶ್ರೀಮತಿ ಇಂದುರವರು ದೇವಕಿ ರೈತ ಸಂಘದ ಸದಸ್ಯರಾದ ಶ್ರೀಮತಿ ಕಮಲಾಭಾಯಿರವರಿಗೆ ಸಮೃದ್ಧಿ ಲೋನ್ ಪಡೆದುಕೊಂಡು ಸ್ವ ಉದ್ಯೋಗ ಮಾಡಲು ತಿಳಿಸಲಾಯಿತು. ಕಮಲಾಭಾಯಿ ರವರು ಮಾಹಿತಿ ಪಡೆದುಕೊಂಡು ಸಮೃದ್ಧಿಲೋನ್ 35000 ಸಾವಿರ ರೂಪಾಯಿ ಮತ್ತು ದೇವಕಿ ರೈತ ಸಂಘದಲ್ಲಿ 35000 ಸಾವಿರ ರೂಪಾಯಿ ಸಾಲ ಪಡೆದುಕೊಂಡು ರೊಟ್ಟಿಮಾಡುವ ಯಂತ್ರವನ್ನು ಖರೀದಿಮಾಡಿ ತಮ್ಮ ಮನೆಯಲ್ಲಿ ರೊಟ್ಟಿ ವ್ಯಾಪಾರವನ್ನು ಮಾಡುತ್ತಿದ್ದಾರೆ. ತಿಂಗಳಿಗೆ 10,000 ರೂಪಾಯಿ ಪಡೆದುಕೊಳ್ಳುತ್ತಿದ್ದಾರೆ ಎಂದು ಕಮಲಾಭಾಯಿರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

## “ಸಾಯಂಕಾಲ ಕಲಿಕಾ ಕೇಂದ್ರದ ವರದಿ”



ದಿನಾಂಕ 23 ಮಾರ್ಚ್ 2026ರಂದು ಸಂಜೀವ ನಗರ ಕಲಿಕಾ ಕೇಂದ್ರದಲ್ಲಿ ವಿಶ್ವಜಲ ದಿನ ಆಚರಿಸಲಾಯಿತು. ಈ ಒಂದು ದಿನವು 1993 ರಿಂದ ವಿಶ್ವ ಸಂಸ್ಥೆಯ ಘೋಷಣೆಯ ಮೂಲಕ ನೀರಿನ ಒಂದು ಪ್ರಾಮುಖ್ಯತೆ ಜನರಲ್ಲಿ ಜಾಗೃತಿ ಮೂಡಿಸುವ ಒಂದು ಉದ್ದೇಶವಾಗಿದ್ದು ನೀರನ್ನು ವ್ಯರ್ಥಮಾಡದೆ ಕಲಿಷಿತಗೊಳಿಸದೆ ಮಿತವಾಗಿ ಬಳಕೆ ಮಾಡುವುದರ ಬಗ್ಗೆ ಕಲಿಕಾ ಕೇಂದ್ರದ ಮಕ್ಕಳಿಗೆ ಮಾಹಿತಿ ನೀಡಲಾಯಿತು ಒಟ್ಟು 27 ಮಕ್ಕಳು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## "ಕಲಿಕಾ ಕೇಂದ್ರದ ಮಕ್ಕಳಿಗೆ ಒಂದು ದಿನದ ಪ್ರವಾಸ"



ದಿನಾಂಕ 01 ಮಾರ್ಚ್ 2026 ರಂದು ಸೇವಾ ಸಂಗಮ ಸಂಸ್ಥೆ ವತಿಯಿಂದ ಕಲಿಕಾ ಕೇಂದ್ರದ ಮಕ್ಕಳಿಗೆಒಂದು ದಿನದ ಬೀದರ್ ಪ್ರವಾಸಕ್ಕೆ ಗೊಳಪಡಿಲಾಯಿತು. ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸಾ ಕಾರ್ಯಕ್ರಮದ ವ್ಯವಸ್ಥಾಪಕಿ ಸಿಸ್ಟರ್ ವೀರಾ ಹಾಗೂ ನಾಲ್ಕು ಕಲಿಕಾ ಕೇಂದ್ರ ಶಿಕ್ಷಕಿಯರು ಹಾಜರಿದ್ದರು. ಬೀದರ್ ಒಂದು ಐತಿಹಾಸಿಕ ಸ್ಥಳವಾಗಿದ್ದು ಬೀದರ್ ಕೋಟೆ, ಗುರುನಾನಕ್ ಉದ್ಯಾನವನ ವೀಕ್ಷಣೆ ಮಾಡಲಾಯಿತು. ಒಟ್ಟು 73 ಜನ ಹಾಜರಿದ್ದರು.

# "ಮಕ್ಕಳ ಮನೆ ಕಾರ್ಯಕ್ರಮ"

## "ಐದನೇಯ ಮಕ್ಕಳ ಮನೆ ಕೇಂದ್ರವನ್ನು ಉದ್ಘಾಟನೆ ಕಾರ್ಯಕ್ರಮ"



11 ಮಾರ್ಚ್ 2026ರಂದು ಯಡ್ರಾಮಿ ತಾಲೂಕಿನ ಸಾತ್ಕೇಡ್ಗಾ ಗ್ರಾಮದಲ್ಲಿ ಮಕ್ಕಳ ಮನೆ ಐದನೇ ಕೇಂದ್ರವನ್ನು ಉದ್ಘಾಟನೆಯನ್ನು ಮಾಡಲಾಯಿತು. ಮಕ್ಕಳ ಮನೆ ಕಾರ್ಯಕ್ರಮದ ಕೇಂದ್ರ ಬಿಂದುವಾಗಿರುವಂತಹ ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ರವರು ಮಕ್ಕಳ ಮನೆ ಕಾರ್ಯಕ್ರಮದ ಉದ್ದೇಶಗಳು ಮತ್ತು ಈ ಕೇಂದ್ರದಲ್ಲಿ ಸಿಗುವಂತಹ ಸೌಲಭ್ಯಗಳು ಕುರಿತು ಸವಿಸ್ತರವಾಗಿ ತಿಳಿಸಿ ಮಕ್ಕಳಿಗೆ ಇಲ್ಲಿ ಬಿಡುವುದರಿಂದ ಮಕ್ಕಳನ ಬೆಳವಣಿಗೆ ಹಾಗೂ ಬುದ್ಧಿಶಕ್ತಿಯನ್ನು ಹೆಚ್ಚಿಸುವುದು ಮಕ್ಕಳು ಬೆಳವಣಿಗೆ ಇಲ್ಲಿ ಸಿಗುವಂತ ಮೂರು ತರಹದ ಊಟವನ್ನು ಪೌಷ್ಟಿಕ ಆಹಾರಯುಕ್ತ ಹಸಿರು ತರಕಾರಿ ಹಾಗೂ ಊಟದಲ್ಲಿ ಮಧ್ಯಾಹ್ನದಲಿ ಕಿಚಡಿ ಜೊತೆ ಒಂದು



ಮೊಟ್ಟೆಯನ್ನು ನೀಡುವುದು ಏಳು ತಿಂಗಳಿಂದ ಮೂರು ವರ್ಷದ ಒಳಗಿನ ಮಕ್ಕಳಿಗೆ ಈ ಆಹಾರವನ್ನು ಬಹಳ ಮುಖ್ಯವಾಗಿ ಅವರ ದೇಹದ ಬೆಳವಣಿಗೆ ರಕ್ತಹೀನತೆ ಇರುವಂತ ಮಕ್ಕಳಿಗೂ ಸಹ ಈ ಒಂದು ಊಟವನ್ನು ಅಮೂಲ್ಯವಾಗಿರುತ್ತದೆ. ಈ ಕೇಂದ್ರದಲ್ಲಿ ಯಾವುದೇ ಮಕ್ಕಳಿಗೆ ಶುಲ್ಕ ಇರೋದಿಲ್ಲ ಉಚಿತವಾಗಿ ಈ ಸೌಲಭ್ಯವನ್ನು ಪಡೆದುಕೊಳ್ಳುವುದು ಕೇವಲ ಒಂದು ಕೇಂದ್ರದಲ್ಲಿ 20 ಮಕ್ಕಳಿಗೆ ಮಾತ್ರ ಅವಕಾಶ ಇರುವುದು ಎಲ್ಲರೂ ಬೇಗನೆ ತಮ್ಮ ಮಕ್ಕಳಿಗೆ ನೋಂದಾಯಿಸಿ ಇದರ ಸೌಲಭ್ಯ ಪಡೆದುಕೊಳ್ಳಬೇಕೆಂದು ತಿಳಿಸಿದರು.

## "ಮಕ್ಕಳ ಮನೆ ಕೇಂದ್ರದಲ್ಲಿ ಮಕ್ಕಳ ತಾಯಂದಿರ ಸಭೆ"



10 ಮಾರ್ಚ್ 2026ರಂದು ಯಡ್ರಮಿ ತಾಲೂಕಿನ ಇಜೇರಿ ಗ್ರಾಮದ ಮಕ್ಕಳ ಮನೆ ಕೇಂದ್ರ ಒಂದು ಹಾಗೂ ಎರಡರಲ್ಲಿ ಮಕ್ಕಳ ತಾಯಂದಿರ ಸಭೆಯನ್ನು ಆಯೋಜಿಸಲಾಯಿತು. ಈ ಒಂದು ಮಕ್ಕಳ ತಾಯಂದಿರ ಸಭೆಯಲ್ಲಿ ಚರ್ಚೆಯಾದ ವಿಷಯಗಳು ಮಕ್ಕಳ ಹಾಜರಾತಿ ಮತ್ತು ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವುದರ ಕುರಿತು, ಪ್ರತಿದಿನ ಕೇಂದ್ರಕ್ಕೆ ಮಕ್ಕಳನ್ನು ಕಳಿಸುವುದರಿಂದ ಬೆಳಗಿನ ಉಪಹಾರ ಮಧ್ಯಾಹ್ನ ಸಮತೋಲನ ಆಹಾರ ಮತ್ತು ಸಂಜೆ ಸಮಯದಲ್ಲಿ ಅಲ್ಪ ಉಪಹಾರದ ಮೂಲಕ ಮಕ್ಕಳಿಗೆ ದಿನನಿತ್ಯದ ಸಮತೋಲನ ಆಹಾರವನ್ನು ಮಕ್ಕಳ ಬೆಳವಣಿಗೆ ಹಾಗೂ ಅವರಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಾಗುತ್ತದೆ ಸರಿಯಾದ ಸಮಯಕ್ಕೆ ಮಕ್ಕಳಿಗೆ ಪೌಷ್ಟಿಕ ಆಹಾರ ಸಿಗುವುದರಿಂದ ಮಕ್ಕಳ ಆರೋಗ್ಯದಲ್ಲಿ ಬದಲಾವಣೆಯನ್ನು ಕಾಣಬಹುದು ಅವರ ತೂಕಕ್ಕೆ ತಕ್ಕಂತೆ ಎತ್ತರವನ್ನು ಹೊಂದಿ ಅವರು ಪೌಷ್ಟಿಕ ಮಕ್ಕಳಾಗಿ ಬೆಳೆಯಲು ಸಹಾಯವಾಗುತ್ತದೆ. ಈ ವ್ಯವಸ್ಥೆಯಿಂದ ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ಕಡಿಮೆಗೊಳಿಸಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

## "ಮಕ್ಕಳ ಮನೆ ಕಾರ್ಯಕ್ರಮದ ಸಿಬ್ಬಂದಿಯ ವರ್ಗದವರ ತಿಂಗಳ ಮೌಲ್ಯಮಾಪನ ಸಭೆ"



ಶಿಶುಗರ್ ಯಾಪ್ ಮೂಲಕ ಮಕ್ಕಳ ನೊಂದಣಿ ಮಾಡಬೇಕಾಗಿದೆ ಮುಂದಿನ ಯಾವ ಗ್ರಾಮಗಳಲ್ಲಿ ಸರ್ವೆ ಅಥವಾ ಸಮೀಕ್ಷೆ ನಡೆಸಬೇಕು ಮತ್ತು ಸಿಬ್ಬಂದಿಯವರಿಗೆ ಅತಿ ಹೆಚ್ಚು ಬೇಸಿಗೆ ಇರುವ ಕಾರಣ ಆರೋಗ್ಯದ ಕಡೆ ಗಮನ ಕೊಡಬೇಕೆಂದು ತಿಳಿಸಿ ಯಾವುದೇ ಕಾಮಗಾರಿಗಳಲ್ಲಿ ಗುಂಪು ಚಟುವಟಿಕೆ ಮಾಡುವ ಮೂಲಕ ಕಾರ್ಯರೂಪವನ್ನು ಮತ್ತು ಮಕ್ಕಳ ಮನೆ ಉದ್ಘಾಟನೆ ಮಾಡುವ ಕಾರ್ಯಯೋಜನೆ ರೂಪಿಸುವುದಕ್ಕಾಗಿ ಮಕ್ಕಳ ಮನೆಯಲ್ಲಿ ಎಲ್ಲ ಸಿಬ್ಬಂದಿ ವರ್ಗದವರಿಗೆ ತಿಳಿಸಿದರು.

## "ಪೌಷ್ಟಿಕ ಆಹಾರದ ಸೇವನೆಯಿಂದ ಮಕ್ಕಳಲ್ಲಿ ರಕ್ತಹೀನತೆಯಿಂದ ಹಾಗೂ ರೋಗಗಳಿಂದ ರಕ್ಷಿಸಬಹುದು"



16 ಮಾರ್ಚ್ 2026ರಂದು ಆಲೂರು ಗ್ರಾಮದಲ್ಲಿ ತಾಯಂದಿರ ಸಭೆಯನ್ನು ಮಾಡಲಾಯಿತು. ಮಕ್ಕಳ ಬೆಳವಣಿಗೆ ಕುಂಠಿತ ಇರುವಂತ ಮಕ್ಕಳಿಗೆ ಪೌಷ್ಟಿಕ ಆಹಾರ ಅವಶ್ಯಕತೆ. ಪೌಷ್ಟಿಕ ಆಹಾರದ ಕೊರತೆಯಿಂದ ಶಿಶು ಮರಣವನ್ನು ಕಡಿಮೆಗೊಳಿಸಬಹುದು ಹಾಗೂ ಪೌಷ್ಟಿಕ ಆಹಾರದ ಸೇವನೆಯಿಂದ ಮಕ್ಕಳಲ್ಲಿ ರಕ್ತಹೀನತೆಯನ್ನು ಹಾಗೂ ಅನೇಕ ರೋಗಗಳಿಂದ ಅವರನ್ನು ರಕ್ಷಿಸಬಹುದು. ಕೂಲಿ ಕೆಲಸಕ್ಕೆ ಹೋಗುವ ತಾಯಂದಿರಿಗೆ ಅಪೌಷ್ಟಿಕ ಮಕ್ಕಳ ಕಡೆಗೆ ಹೆಚ್ಚಿನ ಗಮನ ಕೊಡದೆ ಇರುವುದರಿಂದ ನಮ್ಮ ಕೇಂದ್ರದಿಂದ ನಮ್ಮ ತಾಯಂದಿರಿಗೆ ಒಂದು ಅಮೂಲ್ಯವಾದ ಕೊಡುಗೆಯಾಗಿದೆ. ಅಪೌಷ್ಟಿಕತೆ ಕೂಡ ಒಂದು ಬಡತನಕ್ಕೆ ಕಾರಣವಾಗಿದ್ದರಿಂದ ಮಕ್ಕಳಿಗೆ ಸರಿಯಾದ ಸಮಯಕ್ಕೆ ಆರೈಕೆ ಸಿಗದೇ ಇರುವುದರಿಂದ ಮಕ್ಕಳು ಅನೇಕ ತೊಂದರೆಗಳಿಗೆ ಒಳಗಾಗುತ್ತಾರೆ. ಪ್ರತಿದಿನ ಕೇಂದ್ರದ ಮೂಲಕ ಮಕ್ಕಳಿಗೆ ಸಮತೋಲನ ಆಹಾರದ ಜೊತೆಗೆ ಅನೇಕ ಚಟುವಟಿಕೆಗಳ ಕೂಡ ನಡೆಸಲಾಗುವುದು. ಮಧ್ಯಾಹ್ನ ಸಮಯದಲ್ಲಿ ಮಕ್ಕಳಿಗೆ ಊಟವನ್ನು ನೀಡಿ ವಿಶ್ರಾಂತಿ ನೀಡುವ ವ್ಯವಸ್ಥೆಕೂಡ ಕೇಂದ್ರದಿಂದ ದೊರೆಯುತ್ತದೆ. ಇದರಿಂದ ಮಕ್ಕಳಲ್ಲಿ ದೈಹಿಕ ಬೆಳವಣಿಗೆ ಮತ್ತು ಮಾನಸಿಕವಾಗಿ ಸದೃಢರಾಗುತ್ತಾರೆ. ಮುಂದೆ ಒಂದು ಆರೋಗ್ಯವಾಗಿ ಬೆಳೆಯಲು ಮಕ್ಕಳಿಗೆ ಅನುಕೂಲವಾಗುತ್ತದೆ. ಈ ವ್ಯವಸ್ಥೆಯ ಮೂಲಕ ಮಕ್ಕಳಲ್ಲಿರುವ ಅಪೌಷ್ಟಿಕತೆಯನ್ನು ಹೋಗಲಾಡಿಸಿ ಪೌಷ್ಟಿಕವಂತ ಮಗುವಾಗಿ ಬೆಳೆಯಲು ಅನುಕೂಲವಾಗುತ್ತದೆ ಎಂದು ತಿಳಿಸಿದ್ದರು.

## "ಸೈದಾಪುರ್ ಗ್ರಾಮದಲ್ಲಿ ಆರನೇ ಮಕ್ಕಳ ಮನೆ ಕೇಂದ್ರ ಉದ್ಘಾಟನೆ"



25 ಮಾರ್ಚ್ 2026ರಂದು ಸೈದಾಪುರ್ ಗ್ರಾಮದಲ್ಲಿ ಮಕ್ಕಳ ಮನೆ ಉದ್ಘಾಟನೆ ಮಾಡಲಾಯಿತು. ಸೇವಾ ಸಂಗಮ ಸಂಸ್ಥೆಯ ಸಹನಿರ್ದೇಶಕರಾದ ಫಾದರ್ ದೀಪಕ್ ರವರು ಪ್ರಾಸ್ತವಿಕ ನುಡಿಯಲ್ಲಿಬ ಮಾತನಾಡಿದ್ದರು. ಮಕ್ಕಳ ಮನೆ ಇಂದು ನಾವು ಆರನೇ ಕೇಂದ್ರ ಉದ್ಘಾಟನೆ ಮಾಡಿದ್ದೇವೆ. ಈ ಗ್ರಾಮದ ತಾಯಂದಿರ ಹಾಗೂ ಈ ಗ್ರಾಮದಲ್ಲಿ 40 ಮಕ್ಕಳು ಇರುವುದು ಇದರ ಸದುಪಯೋಗ ಪಡಿಕೊಳ್ಳಬೇಕೆಂದು ಮಾಹಿತಿ ನೀಡಿದ್ದಾರೆ. ಅಜೀಂ ಪ್ರೇಮ್‌ಜಿ ಸಂಸ್ಥೆ ಸಂಪನ್ಮೂಲ ವ್ಯಕ್ತಿಗಳಾದ ಶರಣು ಸರ್ ಕಾರ್ಯಕ್ರಮದ ಪ್ರಸ್ತಾವಿಕ ನುಡಿಯನು ್ತಿಳಿಸಿದರು. ಸೇವಾ ಸಂಗಮ ಮಕ್ಕಳ ಮನೆ ಕಾರ್ಯಕ್ರಮವನ್ನು ಸ್ಥಾಪಿಸಲಾಯಿತು. ಏಳು ತಿಂಗಳಿಂದ ಮೂರು ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಈ ಮಕ್ಕಳ ಮನೆಗೆ ಅವಕಾಶ ಇರುವುದು ಮಕ್ಕಳಮನೆಯ ಉದ್ದೇಶ ಪ್ರತಿಯೊಂದು ಗ್ರಾಮದಲ್ಲಿ ಏಳು ತಿಂಗಳಯಿಂದ ಮೂರು ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಮಕ್ಕಳ ಮನೆಗಳಿಗೆ ಪ್ರವೇಶವನ್ನು ಸಕ್ರಿಯಗೊಳಿಸುವುದು ಮತ್ತು ಪೂರಕ ಆಹಾರ ಬಾಲ್ಯದ ಅಭಿವೃದ್ಧಿ ಮತ್ತು ಸರ್ಕಾರದ ಯೋಜನೆಗಳಿಗೆ ಪ್ರವೇಶವನ್ನು ಸುಖಮ ಗೊಳಿಸುವುದು. ಹಾಗೂ ಬೆಳವಣಿಗೆ ಕುಂಠಿತ ಕಡಿಮೆ ತೂಕ ಮತ್ತು ಕ್ಷಣಿಸಿದ ಮಕ್ಕಳನ್ನು 7 ತಿಂಗಳು 3 ವರ್ಷದ ವಯಸ್ಸಿನ ಗುರುತಿಸುವುದು. ಅವರನ್ನು ಆರೋಗ್ಯ ಸೌಲಭ್ಯಗಳಿಗಾಗಿ ನೋಂದಾಯಿಸುವುದು. ಹಾಗೂ ಅನುಸರಣೆ ಮಾಡುವುದು ಕುರಿತು ಮಾಹಿತಿಯನ್ನು ನೀಡಿದರು. ಗ್ರಾಮ ಪಂಚಾಯತ ಸದಸ್ಯರು ಮೌಲನಾ ಸಾಬರು ಈ ಮಕ್ಕಳ ಮನೆ ಉದ್ಘಾಟನಾ ಸಮಯದಲ್ಲಿ ಸೇವಾ ಸಂಗಮ ಸಂಸ್ಥೆಯವರಿಗೆ ಧನ್ಯವಾದ ತಿಳಿಸುತ್ತಾ ಮಕ್ಕಳಿಗೆ ಪ್ರತಿನಿತ್ಯ ಇಲ್ಲಿ ಕಳಿಸಿಕೊಡುವುದು ಮತ್ತು ನಾವು ನಮ್ಮ ಮಕ್ಕಳಿಗೆ ನೋಡೋಕ್ಕಿಂತ ಹೆಚ್ಚು ಇಲ್ಲಿ ಅವರು ಕಾಳಜಿ ವಹಿಸುವದರ ಬಗ್ಗೆ ಗ್ರಾಮಸ್ಥ ತಾಯಂದಿರಿಗೆ ತಿಳಿಸಿದರು.

## "ಕೇಂದ್ರಗಳಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ ಹಾಗೂ ಮೌಲ್ಯಮಾಪನ"





ಮಾರ್ಚ್ 16 ಹಾಗೂ 18 2026ರಂದು ವಸ್ತಾರಿ ಮತ್ತು ಆಲೂರು ಗ್ರಾಮಗಳಲ್ಲಿ ಮಕ್ಕಳ ಎತ್ತರ ಹಾಗೂ ತೂಕವನ್ನು ಅಳತೆ ಮಾಡುವುದು. ಕೇಂದ್ರಗಳಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುತ್ತಿರುವ ಕುರಿತು ಪ್ರತಿ ತಿಂಗಳ ಮಕ್ಕಳ ಬೆಳವಣಿಗೆ ಆಗಿದೆ ಇಲ್ಲ ಎಂಬುದರ ಬಗ್ಗೆ ಮಕ್ಕಳಿಗೆ ತಿಂಗಳ ಮೊದಲನೇ ವಾರದಲ್ಲಿ ಎತ್ತರ ಹಾಗೂ ತೂಕ ಅಳತೆ ಮಾಡುವ ಮೂಲಕ ಮಕ್ಕಳ ಬೆಳವಣಿಗೆ ಇರುವಂತಹದು ಕಂಡು ಹಿಡಿದು ಆ ಮಕ್ಕಳಿಗೆ ದಿನದಲ್ಲಿ ಐದು ಸಮಯ ಊಟವನ್ನು ನೀಡುವುದು ಹಾಗೂ ಅಪೌಷ್ಟಿಕತೆಯ ಸಮಾಲೋಚನದಲ್ಲಿ ಇರುವಂತಹ ಮಕ್ಕಳಿಗೆ ಮೂರು ಸಮಯ ಊಟವನ್ನು ನೀಡುವುದು. ಅಪೌಷ್ಟಿಕತೆ ಕಡಿಮೆ ಇರುವಂತಹ ಮಕ್ಕಳು ಗುರುತಿಸಿ ಆ ಮಕ್ಕಳಿಗೆ ಸರ್ಕಾರಿ ಆಸ್ಪತ್ರೆಯ ತಪಸನೆ ಮಾಡಿಸಿ ಮುಂದಿನ ಆರೋಗ್ಯದಲ್ಲಿ ಏರುಪೇರು ಆದಲ್ಲಿ ಅಂತ ಮಕ್ಕಳಿಗೆ ಸೂಕ್ತ ಚಿಕಿತ್ಸೆ ಕೊಡಿಸಿ ಮಕ್ಕಳ ಬೆಳವಣಿಗೆಯಲ್ಲಿ ಬದಲಾವಣೆ ಮಾಡಲು ಕಾರ್ಯರೂಪಕ್ಕೆ ತರುವುದು ಎಂದು ಹೇಳಿದ್ದರು.

## “ಮಕ್ಕಳ ಮನೆಯ ಯಡ್ರಾಮಿ ಮತ್ತು ಜೇವರ್ಗಿ ತಾಲೂಕಿನ ಕೇಂದ್ರದಲ್ಲಿ ಆರೈಕೆದಾರರ ಮಾಸಿಕ ಸಭೆ”



ದಿನಾಂಕ 17 ಮಾರ್ಚ್ 2026ರಂದು ಯಡ್ರಾಮಿ ತಾಲೂಕಿನಲ್ಲಿ ಇರುವಂತ ಸೇವಾ ಸಂಘ ಸಂಸ್ಥೆ ಮಕ್ಕಳ ಮನೆ ಕಾರ್ಯಕ್ರಮದ ಕೇಂದ್ರದಲ್ಲಿ ಮಕ್ಕಳ ಮನೆಯ ಯಡ್ರಾಮಿ ಮತ್ತು ಜೇವರ್ಗಿ ತಾಲೂಕಿನ ಆರೈಕೆದಾರರ ಮಾಸಿಕ ಸಭೆ ಮಾಡಲಾಯಿತು. ಮೊದಲಿಗೆ ಅಜೀಂ ಪ್ರೇಮ್ಜಿ ಫೌಂಡೇಶನ್ ಮಕ್ಕಳಬ ಮನೆಯ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಆಗಿರುವಂತ ಶ್ರೀ ಶರಣಅವರು ಸಭೆಯನ್ನು ಮುಂದುವರಿಸ್ಕೊಂಡು ಹೋದರು. ಆರೈಕೆದಾರರಿಂದ ಮಾಸಿಕ ಸಭೆ ಎಂದರೇನು ಎಂದು ಪ್ರಶ್ನಿಸಿ ಆರೈಕೆದಾರರಿಂದಲೇ ಹೇಳಿಸಿ ಸ್ಪಷ್ಟಪಡಿಸಿದರು. ಜೊತೆಗೆ ಮಾಸಿಕ ಸಭೆಯ ಮಹತ್ವದ ಕುರಿತು ವಿವರಿಸಿದರು. ಇಂದಿನ ಸಭೆಯಲ್ಲಿ ಚರ್ಚಿಸಿದ ಸ್ವಚ್ಛತೆ ವಿಷಯಗಳ ಕುರಿತು ಆರೈಕೆದಾರರಿಂದ ಪ್ರತಿಕ್ರಿಯೆ ಪಡೆದುಕೊಂಡರು. ಇಂದಿನ ಸಭೆಯ ಅಂಶಗಳಲ್ಲಿ ಬದಲಾವಣೆ ಮಾಡಲಾಯಿತು. ಮಕ್ಕಳು ಚೆನ್ನಾಗಿ ಊಟ ಮಾಡುತ್ತಿರುವುದು, ಮಕ್ಕಳ ಬೆಳವಣಿಗೆ ಚೆನ್ನಾಗಿ ಆಗುತ್ತಿದ್ದು, ಮಕ್ಕಳಿಗೆ ಕೈ ತೊಳೆದುಕೊಳ್ಳೋ ಅಭ್ಯಾಸವಾಗಿದೆ, ಮೊದಲು ಕೇಂದ್ರಕ್ಕೆ ಮಕ್ಕಳನ್ನು ತಂದು ಬಿಡದೇಇರುವ ಪೋಷಕರು ಇವಾಗ ಕರೆತರುತ್ತಿದ್ದಾರೆ. ಪೌಷ್ಟಿಕ ಆಹಾರ ಸೇವಿಸಲು ಮಕ್ಕಳು ನಿರಾಕರಿಸುತ್ತಿದ್ದರು. ಪೋಷಕರು ಮೊದಲು ಕೇಂದ್ರಕ್ಕೆ ಕಳಿಸಲು ಹಿಂದೇಟು ಹಾಕುತ್ತಿದ್ದರು.



ಆದರೆ ಈಗ ಮಕ್ಕಳನ್ನು ಕಳುಹಿಸುತ್ತಿದ್ದಾರೆ. ಮಕ್ಕಳ ಕೇಂದ್ರಕ್ಕೆ ನಿಧಾನವಾಗಿ ಹೊಂದಾಣಿಕೆ ಬರುತ್ತಿದ್ದಾರೆ. ಹೊಸದಾಗಿ ಆಯ್ಕೆಯಾದವರಿಗೆ ಕೇಂದ್ರ ಅನುಭವವನ್ನು ಮಾತುಗಳನ್ನು ಪ್ರೇರಣಾವಾಗಿದೆ ಎಂದರು. ಮಕ್ಕಳ ಮನೆಯ ಜವಾಬ್ದಾರಿಯಿಂದ ಸಮುದಾಯದಲ್ಲಿ ಗಣತಿ ಹೆಚ್ಚಾಗಿದೆ. ಜನರು ನಮ್ಮನ್ನು ಗುರುತಿಸುತ್ತಾರೆ. ಎಂದು ತಮ್ಮ ಅನುಭವವನ್ನು ಹಂಚಿಕೊಂಡರು. ಅಜೀಂ ಪ್ರೇಮ್ಜಿ ಫೌಂಡೇಶನ್ ಸಂಪನ್ಮೂಲ ವ್ಯಕ್ತಿಗಳಾದ ರಂಗನಾಥ ಸರ್ ರವರು ಕೇಂದ್ರ ಭೇಟಿ ನೀಡಿದಾಗ ಮಕ್ಕಳ ಮನೆ ಕಾರ್ಯವೈಕರಿ ಕೊಂಡು ಸಂತಸ ವ್ಯಕ್ತಪಡಿಸಿದರು. ಮಕ್ಕಳ ಸುರಕ್ಷಿತಲ್ಲಿ ಯಾವುದೇ ರಾಜಿ ಇಲ್ಲ ಎಂದು ಎಂಬುದಾಗಿ ಶರಣುಸರ್ ಹೇಳಿದರು. ಕೈತೊಳೆದನು ಶೌಚಾಲಯ ಬಳಕೆ ಕುರಿತು ಮಕ್ಕಳು ರೂಡಿಸಿಕೊಳ್ಳುವುದು ಸಂತಸದ ಸಂಗತಿ ಎಂದರು. ಕೆಲವು ಕೇಂದ್ರದಲ್ಲಿ ಸುರಕ್ಷಿತ ಗೇಟ್ ಮಕ್ಕಳು ತೆರೆಯುತ್ತಿದ್ದಾರೆ. ಇದರ ಕುರಿತು ಕೇಂದ್ರದ ಮೇಲ್ವಿಚಾರಕರಿಗೆ ಗಮನಕ್ಕೆ ಕೂಡಲೇ ತರಬೇಕು ಕೆಲವು ಅಂಗನವಾಡಿ ಕಾರ್ಯಕರ್ತೆಯರು ನಮ್ಮ ಮಕ್ಕಳನ್ನು ನಿಮ್ಮ ಕೇಂದ್ರಕ್ಕೆ ಕರೆದುಕೊಂಡು ಹೋಗುತ್ತಿದ್ದೀರಿ ಎಂಬುದಾಗಿ ಆರೈಕೆದಾರರಿಗೆ ಕೇಳುತ್ತಿದ್ದಾರೆ ಎಂದು ಮಾಹಿತಿ ನೀಡಿದ್ದರು.

## “ಅಂತರರಾಷ್ಟ್ರೀಯ ಮಹಿಳಾ ದಿನಾಚಾರಣೆ”



ದಿನಾಂಕ 13 ಮಾರ್ಚ್ 2026ರಂದು ಸೇವಾ ಸಂಗಮ ಸಂಸ್ಥೆಯ ಹಾಗೂ ಸ್ತ್ರೀವಾಣಿ ಸಂಸ್ಥೆ ಅಡಿಯಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮದರ್ ತೆರೆಸಾ ಸಭಾಂಗಣದಲ್ಲಿ ಆಚರಿಸಲಾಯಿತು. ಈ ದಿವ್ಯ ಸಾನಿಧ್ಯವನ್ನು ವಹಿಸಿರುವ ಸೇಂಟ್ಮೇರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಒಂದನೇ ಫಾದರ್ ಪವೀಣ ಜೋಸೆಫ್ ಈ ಕಾರ್ಯಕ್ರಮದ ಸಾನಿಧ್ಯವನ್ನು ವಹಿಸಿದ್ದರು. ಈ ಒಂದು ಯೋಜನೆ ಅಡಿಯಲ್ಲಿ ಇಂದಿನ ಆಧುನಿಕ ಯುಗದಲಿ ಮಹಿಳೆಯರು ಪುರುಷರಷ್ಟೇ ಸರಿಸಮಾನ ಹೊಂದಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲಿ ಉನ್ನತ ಹುದ್ದೆ ಹೊಂದಿ ಅತ್ಯುತಮವಾಗಿ ಕಾರ್ಯನಿರ್ವಹಿಸುತ್ತಿದರೆ. ಸಶಕ್ತತೆಯಲ್ಲಿ ಮುನ್ನಡೆಯುತ್ತಿದ್ದಾರೆ ಹೊಸ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಮಹಿಳೆಯರು ಹೆಣ್ಣು ಸಶಕ್ತರಾಗಬೇಕು ಎಂದು ಹೇಳುತ್ತಾ ಈ ಕಾರ್ಯಕ್ರಮಕ್ಕೆ ಆಶೀರ್ವಚನ ನೀಡಿದರು. ವಿಶೇಷವಾಗಿ ಈ ಕಾರ್ಯಕ್ರಮಕ್ಕೆ ನಗರದ ಕಟ್ಟಡ ಕಾರ್ಮಿಕಾ ಇಲಾಖೆ ಇಂದ ಅಧಿಕಾರಿಯಾದ ಶ್ರೀಯುತ. ಲಕ್ಷ್ಮಿಕಾಂತ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡುತ ಕಟ್ಟಡ ಕಾರ್ಮಿಕ ಇಲಾಖೆ ಇಂದ ಸಿಗುವ ಸೌಲಭ್ಯಗಳನ್ನು ಪಡೆಯಬೇಕಾದರೆ ಯಾವೆಲ್ಲ ಅರ್ಹತೆಗಳು ಇರಬೇಕು ಆ ಸೌಲಭ್ಯಗಳನ್ನು ಪಡೆಯಲು ಯಾವಲ ದಾಖಲಾತಿಗಳು ಬೇಕು ಎಂಬುದನ್ನು



ವಿವರಿಸಿದರು. ಈ ಸಂಸ್ಥೆಗೆ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಶ್ರೀಮತಿ ಜ್ಯೋತಿರವರು ಮಾತನಾಡಿ ಸಮಾನತೆ ಸಶಕ್ತತೆ ಬಗ್ಗೆ ಮಾತನಾಡುವಾಗ ಶಿಕ್ಷಣದಲ್ಲಿ ಮಹಿಳೆಯರು ಉತ್ತಮ ರೀತಿಯಲ್ಲಿ ಭಾಗವಹಿಸುತ್ತಿದ್ದಾರೆ. ಇನ್ನು ಕಾನೂನು ರೀತಿಯಲ್ಲಿ ಸ್ವಾತಂತ್ರ್ಯದಲ್ಲಿ ಇನ್ನು ಹೆಚ್ಚಿನ ರೀತಿಯಲ್ಲಿ ಪಾಲುದಾರಿಕೆಯಲ್ಲಿ ಹೆಜ್ಜೆಯನ್ನು ಇಡುತ್ತಿದ್ದಾರೆ ಎಂದು ಸ್ಫೂರ್ತಿದಾಯಕ ಮಾತುಗಳಿಂದ ಮಹಿಳೆಯರಿಗೆ ಹುರಿದುಂಬಿಸಿದರು. ಈ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ಭಾಷಣವನ್ನು ಮಾಡಿದ ಸೆಂಟ್ಮೇರಿ ಶಾಲೆಯ ಮುಖ್ಯಪಾದ್ಯರು ತೊಟ್ಟಿಲ ತೂಗುವ ಕೈಹಿಡಿ ದೇಶವನ್ನೇ ಆಳುತ್ತದೆ ಅನ್ನುವ ಹಾಗೆ ಪ್ರತಿಯೊಬ್ಬ ಹೆಣ್ಣು ಮಗಳು ತನ್ನ ಆತ್ಮಸ್ಥೈರ್ಯದಿಂದ ಎಲ್ಲ ಕೆಲಸಗಳನ್ನು ಅಚ್ಚುಕಟ್ಟಾಗಿ ನಿಬಾಯಿಸುತ್ತಾಳೆ. ಈ ಒಂದು ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆಯ ಉಪಮೇಯ ಸೇವಾ ಸಂಗಮ ಸಂಸ್ಥೆಯು ಸಮಾಜದಲ್ಲಿ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿಕೊಂಡು ಉತಮ್ಮ ರೀತಿಯಾಗಿ ಹಾಗೂ ನಿಷ್ಠೆಯಿಂದ ಕೆಲಸ ಕಾರ್ಯಮಾಡುತ್ತಾ ಬಂದಿದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ಐದು ಜನ ಮಹಿಳಾ ಸಾಧಕಿಯರಿಗೆ ಗೌರವವಾಗಿ ಸನ್ಮಾನ ಮಾಡಲಾಯಿತು. ಸೇವಾ ಸಂಗಮ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ದಿನಾಚರಣೆ ಕುರಿತು ಪ್ರಾಸ್ತಾವಿಕ ನುಡಿಯನ್ನು ಶ್ರೀಮತಿ ಶ್ವೇತಾರವರು ವರದಿಯನ್ನು ಮಂಡಿಸಿದರು. ಈ ಒಂದ ಕಾರ್ಯಕ್ರಮಕ್ಕೆ ಸದಾ ಬೆಂಬಲ ನೀಡುತ್ತಾ ಬಂದಿರುವ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್, ಈ ಕಾರ್ಯಕ್ರಮ ಉದ್ದೇಶಿಸಿ ಮಾತನಾಡುತ 18 ವರ್ಷದ ನಿಮ್ಮ ಮಕ್ಕಳ ಚುನಾವಣಾ ಗುರುತಿನ ಚೀಟಿ ಕಡ್ಡಾಯವಾಗಿ ಮಾಡಿಸಿರಿ. ನೀವು ಮತದಾನ ಮಾಡುವಾಗ ಸಮರ್ಥ ವ್ಯಕ್ತಿಗೆ ಮತದಾನ ಮಾಡಿ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ 400 ಜನ ಬಾಗವಹಿಸಿ ಈ ಕಾರ್ಯಕ್ರಮಕ್ಕೆ ಮೆರಗು ನೀಡಿದರು.

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

# TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುನರ್ವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.
ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.





**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್ ಪ್ರತಿ ತಿಂಗಳು 4000/– ವರ್ಷಕ್ಕೆ 40,000/–

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/–

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

Name : Sevasangama Development Society
Account No : 16040100022902
IFSC Code : FDRL0001604
Bank : Federal Bank
Branch : Super Market Kalaburagi

Fr. Victor Anil Vas
Director, Seva Sangama & ORBIT

Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in